## 73

# ಪುನರಾವರ್ತನೆ - ಅಥವಾ ನೆನಪು?

## (25:1-12)

ಮೊಟ್ಟ ಮೊದಲು ನಾವು ಅಧ್ಯಾಯ 25ನ್ನು ಓದುವಾಗ ಬೇಸರದ ಆಕಳಿಕೆ ಬರಬಹುದು. ಅವುಗಳನ್ನು ಈಗಾಗಲೇ ಗಮನಿಸಿದ್ದೇವೆ: ಪೌಲನ ವಿಚಾರಣೆ, ಬಲಹೀನ ನಾದ ದೇಶಾಧಿಕಾರಿ, ಅರೋಪಮಾಡಿದ ಹಿರಿ ಸಭೆ ಹಾಗೂ ನಿಗೂಢವಾದ ಪಿತೂರಿ. ನಿಮ್ಮ ಬಗ್ಗೆ ನನಗೆ ತಿಳಿಯದಿದ್ದರೂ, ನಾನು ಪುನರಾವತರ್ವನೆ[1] ಮಾಡುವವನಲ್ಲ. ಕೆಲವರು ಪುಸ್ತಕಗಳನ್ನು ಪುನಃ ಪುನಃ ಓದತ್ತಾರೆ, ಒಂದೇ ಚಲನ ಚಿತ್ರವನ್ನು ಹಾಗೂ ದೂರದರ್ಶನದ ಕಾರ್ಯಕ್ರಮಗಳನ್ನು ಪುನಃ ಪುನಃ ನೋಡುತ್ತಾರೆ, ಆದರೆ ನಾನು ಆ ರೀತಿ ಮಾಡುವನಲ್ಲ.[2] ಹಾಗೂ ನಾನು ಇದನ್ನು ಗಮನಿಸುವಾಗ, ಅದನ್ನು ಮರೆತಿರುವದಿಲ್ಲ, ಮತ್ತು ಮೊದಲನೆಯದಾಗಿ ಅದರಲ್ಲಿ ಗಮನಿಸಲಾರದ ಸಂಗತಿಗಳನ್ನು ಗಮನಿಸುತ್ತೇನೆ. ಅಧ್ಯಾಯ 25 ಈ ವಿಧಧ ಭಾಗವಾಗಿರುತ್ತದೆ. "ಹಳೆಯ ವಿಷಯವಾದರೂ" ಅದನ್ನು ಗಮನಿಸೋಣ. ಇದನ್ನು ಈಗಾಗಲೇ ಧ್ಯಾನ ಮಾಡಿದ್ದರೂ, ಅದರಲ್ಲಿ ಅಡಗಿರುವ ನೂತನ ಸತ್ಯಗಳನ್ನು ಹಾಗೂ ಆಲೋಚನೆಗಳನ್ನು ಕಂಡು ಹಿಡಿಯೋಣ.

### ಕೇವಲವಾದ ಪುನರಾವರ್ತನೆಯೇ? (25:1-9)

**ಅದೇ ಆಟಗಾರರು (ವಚನಗಳು 1, 2)**

24ರ ಕಥೆಯಂತೆಯೇ ಇಲ್ಲಿಯೂ ನೋಡುತ್ತೇವೆ. ಇಲ್ಲಿ ರೋಮಾಯರ ದೇಶಾಧಿಪತಿಯೇ ಪ್ರಮುಖ ವ್ಯಕ್ತಿಯಾಗಿರುವನು - ವ್ಯತ್ಯಾಸವುಳ್ಳ ವ್ಯಕ್ತಿ, ಆದರೂ ರೋಮಾಯರ ದೇಶಾಧಿಪತಿಯೇ ಅಧ್ಯಾಯ 24ರ ಕಡೆಯ ವಚನದಲ್ಲಿ, "ಫೇಲಿಕ್ಸನ ಸ್ಥಾನಕ್ಕೆ ಪೊರ್ಕಿಯ ಫೆಸ್ತನು ಬಂದನು ..." (24:27ಬಿ). 25:1ರಲ್ಲಿ "ಫೆಸ್ತನು ಸೀಮೆಯ ಕಾರ್ಯಭಾರವನ್ನು ವಹಿಸಿಕೊಂಡನು" ಎಂದು ಆರಂಭವಾಗುತ್ತದೆ.

ಫೆಸ್ತನ ಬಗ್ಗೆ ಹೆಚ್ಚಿನ ವಿವರಣೆಯು ನಮಗೆ ತಿಳಿದಿರುವದಿಲ್ಲ. ಒಂದು ವೇಳೆ, ಅವನು ರೋಮಾಯದ ರಾಜವಂಶದವನಾಗಿರಬಹುದು. ಚರಿತ್ರೆಕಾರನಾದ ಯೋಸೇಫನು ಫೆಸ್ತನು ತಿಳುವಳಿಕೆಯುಳ್ಳವನು, ನ್ಯಾಯವಾದಿಯೂ ಹಾಗೂ ಒಪ್ಪಿಕೊಳ್ಳುವ ಮನಸ್ಸುಳವನು ಎಂದು ವರ್ಣಿಸಿರುವನು. ಇವನ ಹಿಂದಿನ ಹಾಗೂ ಮುಂದಿನ ವ್ಯಕ್ತಿಗಳಿಗಿಂತ[3] ನೀತಿಯ ಹಾಗೂ ಗೌರವವುಳ್ಳ ವ್ಯಕ್ತಿಯಾಗಿದ್ದರೂ, ಅವನು ಯುದಾಯ ಸೀಮೆಯಲ್ಲಿದ್ದ ಕಳ್ಳತನಗಳನ್ನು ಹಾಗೂ ಕೊಲೆಗಾರರನ್ನು ಹತ್ತಿಕ್ಕಿದ್ದನು. ಅದೃಷ್ಯವಶಾತ್ ಅವನು ಅಧಿಕಾರದ ಎರಡೇ ವರ್ಷಗಳಲ್ಲಿ ಮರಣ ಹೊಂದಿದನು. ಫೇಲಿಕ್ಸನ ಹಾಗೂ ಫೇಸ್ತನ ನಡುವೆ ಹೋಲಿಕೆಯ ಯಾವ ಸಂಗತಿಗಳೂ ಇರಲಿಲ್ಲ; ಆದರೆ ಅವರು ರೋಮಾಯದ ದೇಶಾಧಿಪತಿಗಳಾಗಿದ್ದಲಿಂದ, ಯೆಹೂದ್ಯರನ್ನು ಮೆಚ್ಚಿಸಲು ಪ್ರಯತ್ನಿಸಿದ್ದರು - ಇದನ್ನು ಮುಂದೆ ನೋಡುತ್ತೇವೆ.

ಪ್ರಾರಂಭದಲ್ಲಿ, ಫೆಸ್ತನ ಕುರಿತು ಮೆಚ್ಚುಗೆ ವ್ಯಕ್ತವಾಗಬಹುದು. "ಅವನು ಉತ್ತಮ ದೇಶಾಧಿಕಾರಿಯಾಗಿರಲು ಯತ್ನಿಸಿದನು ಎಂದು ತಿಳಿಯಬಹುದು. ಅವನು ಆ ಸೀಮೆಯ ಕಾರ್ಯಭಾರವನ್ನು ವಹಿಸಿಕೊಂಡು ಮೂರು ದಿವಸಗಳ ತರುವಾಯ ಕೈಸರೈಯಿಂದ ಯೆರೂಸಲೇಮಿಗೆ ಹೋದನು" (ವಚನ 1ಬಿ). ಅವನು ತಕ್ಷಣವೇ ಯೆರೂಸಲೇಮಿನ

ಯೆಹೂದ್ಯ ನಾಯಕರಗಳನ್ನು ಬೇಟಿ ಮಾಡುವ ಕಾರಣಗಳಿದ್ದವು. ಅವನು ಅವರಿಗೆ ಗೌರವ ಸಲ್ಲಿಸುವ ಅಗತ್ಯವಿತ್ತು (ವಚನ 13 ನೋಡಿರಿ). ಅವನು ಅವರ ಪರಿಚಯ ಮಾಡಿಕೊಳ್ಳುವ ಅಗತ್ಯವಿತ್ತು;[4] ಮತ್ತು ಅವರುಗಳು ಸಹ ಅವನ ಪರಿಚಯ ಮಾಡಿಕೊಳ್ಳಬೇಕಿತ್ತು. ಅವನು ಅವರೆಲ್ಲರ ದೊಡ್ಡ ಕೊರತೆಗಳನ್ನು ತಿಳಿದವನಾಗಿ ಅದನ್ನು ಪರಿಹರಿಸಬೇಕಿತ್ತು. ಪ್ರಮುಖವಾಗಿ, ದೊಡ್ಡದಾದ ಸವಾಲುಗಳನ್ನು ಎದುರಿಸಲು ಅವನಿಗೆ ಅವರ ಸಹಕಾರ ಅತಿ ಅಗತ್ಯವಾಗಿತ್ತು: ಯುದಾಯದ ರಾಜಕೀಯ ಗೊಂದಲವನ್ನು ಪರಿಹರಿಸಬೇಕಿತ್ತು.

ಫೆಸ್ತನು ಯೆರೂಸಲೇಮಿಗೆ ಬಂದಾಗ, ಅಲ್ಲಿ "ಮಹಾಯಾಜಕನೂ[5] ಯೆಹೂದ್ಯರಲ್ಲಿ ಪ್ರಮುಖರು" ಅವನನ್ನು ಎದುರ್ಗೊಂಡರು (ವಚನ 2ಎ) - ಇನ್ನೊಂದು ಮಾತಿನಲ್ಲಿ, ಹಿರಿ ಸಭೆಯವರೇ ಅವನನ್ನು ಸಂಧಿಸಿದರು. ಹಿಂದಿನ ವಿಚಾರಣೆಯಾಗಿ ಎರಡು ವರ್ಷಗಳ ನಂತರ, ಆ ಸಭೆಯ ಅಧ್ಯಕ್ಷರು ಬದಲಾಗಿದ್ದರು. ಅನನೀಯನ[6] ಬದಲಾಗಿ (23:2; 24:1). ಇಷ್ಮಾಯೇಲನು[7] ಮಹಾಯಾಜಕನಾಗಿದ್ದನು. ಅವನು ಸಹ ಅನನೀಯ ಪ್ರತಿರೂಪವಾಗಿದ್ದನು, ಅವನು ಸ್ವಾರ್ಥಿ ಹಾಗೂ ಕರುಣೆ ಇಲ್ಲದವನಾಗಿದ್ದನು.

ಆ ಸೀಮೆಯ ಆಗು ಹೋಗುಗಳ ವಿಚಾರವನ್ನು ಫೆಸ್ತನು ಯೆಹೂದ್ಯರ ಪ್ರಮುಖರ ಸಂಗಡ ಚರ್ಚಿಸುತ್ತಿರುವಾಗ, ಬಹುಶಃ ಆರ್ಥಿಕ ಹಿನ್ನಡೆಯ ಕುರಿತು, ಅಧಿಕವಾಗಿದ್ದ ಅಪರಾಧಗಳ ಕುರಿತು, ಪ್ರಾಯಶಃ ರೋಮಾಯರಿಂದ ಉಂಟಾಗಿರಬಹುದಾಗಿದ್ದ ಅನ್ಯಾಯದ ಕುರಿತು ಮಾತನಾಡುವರು ಎಂದು ಬಯಸಿದ್ದನು; ಅದರ ಬದಲಾಗಿ, ಒಂದು ಇತ್ಯಾರ್ಥವಾಗದ ನ್ಯಾಯಲಯದ ಸಂಗತಿಯಾಗಿತ್ತು ಒಬ್ಬ ವೃದ್ಧನಾದ ಗುಡಾರ ನೇಯುವವನ ಸಂಗತಿಯಾಗಿತ್ತು. ಫೇಲಿಕ್ಸನು ಅವನನ್ನು ಕೈಸರೈಯದ ಸೆರೆಮನೆಯಲ್ಲಿ ಕೊಳೆಯುವದಕ್ಕೆ ಬಿಟ್ಟು ಹೋಗಿದ್ದನು (24:27)! "ಅಲ್ಲಿ ಮಹಾಯಾಜಕನೂ, ಯೆಹೂದ್ಯರಲ್ಲಿ ಪ್ರಮುಖರೂ ಅವನಿಗೆ ಪೌಲನ ಮೇಲಣ ಫಿರಿಯಾದಿಯನ್ನು ಹೇಳಿದರು" (25:2ಎ).

ನಂತರದಲ್ಲಿ ದೇಶಾಧಿಪತಿಯು ನಡೆದಂಥ ಸಂಗತಿಯ ಕುರಿತು ವರದಿ ಸಲ್ಲಿಸಿದನು: "ನಾನು ಯೆರೂಸಲೇಮಿನಲ್ಲಿದ್ದಾಗ ಯೆಹೂದ್ಯರ ಮಹಾಯಾಜಕರೂ ಸಭೇ ಹಿರಿಯರೂ ಅವನ ವಿಷಯವಾಗಿ ನನಗೆ ಫಿರಿಯಾದಿ ಹೇಳಿ ಅವನಿಗೆ ವಿರುದ್ಧವಾಗಿ ತೀರ್ಪು ಆಗಬೇಕೆಂದು ಬೇಡಿಕೊಂಡರು"[8] (ವಚನ 15).[9] "ಯೆಹೂದ್ಯರು ಅವನ ವಿಷಯವಾಗಿ - ಇವನು ಇನ್ನೂ ಮೇಲೆ ಬದುಕಬಾರದೆಂದು ಕೂಗುತ್ತಿದ್ದರು" (ವಚನ 24). ಬಹುಶಃ ಪೌಲನನ್ನು ಅವರ ವಶಕ್ಕೆ ತೆಗೆದುಕೊಳ್ಳಲು ಕೇಳಿಕೊಂಡಿರಬಹುದು.[10] ಅವರು ಫೇಸ್ತನಿಗೆ, "ಫೆಲಿಕ್ಸನು ಅವನನ್ನು ನಮ್ಮ ವಶಕ್ಕೆ ಒಪ್ಪಿಸಬೇಕಿತ್ತು, ಆದರೆ ಮೂರ್ಖನಾದ ರಾಜಕೀಯ ವ್ಯಕ್ತಿಗೆ ನ್ಯಾಯದ ಬಗ್ಗೆ ಅರಿವು ಇರಲಿಲ್ಲ" ಎಂದು ಹೇಳಿರಬಹುದು!

ಫೆಸ್ತನು ವಿಚಾರಣೆಮಾಡದೆ, ಪೌಲನನ್ನು ಅಪಾರಾಧಿಯೆಂದು ತಿಳಿದು ತೀರ್ಪು ನೀಡಬೇಕಿತ್ತೆಂದು ಜನರು ಬಯಸಿದ್ದರು, "ದೋಷ ವಿಷಯದಲ್ಲಿ ಪ್ರತಿವಾದ ಮಾಡುವದಕ್ಕೆ ಆಸ್ಪದ ಕೊಡದೆ ಅವನನ್ನು ಒಪ್ಪಿಸುವದು ರೋಮಾಯರ ಪದ್ಧತಿಯಲ್ಲವೆಂದು" ಅವನು ಉತ್ತರಿಸಿದನು (ವಚನ 16). ಖೈದಿಯಾದವನು ಭಯಂಕರವಾದ ಯಾವುದೇ ಅಪರಾಧವನ್ನು ಮಾಡಿದ್ದರೂ, ಅವನು ತನ್ನ ಪರವಾಗಿವಾದ ಮಾಡುವ ಹಕ್ಕನ್ನು ರೋಮಾಯರು ಅನುಗ್ರಹಿಸಿದ್ದರು!

**ಅದೇ ವಿಧವಾದ ಒಳಸಂಚು (ವಚನಗಳು 2-5)**

ಹಿರಿ ಸಭೆಯ ಸದಸ್ಯರು ನ್ಯಾಯ ನೀಡುವ ರೋಮಾಯರ ಸಂಗಡ ವ್ಯವಹಾರ ಮಾಡುತ್ತಿರುವ ವಿಷಯದಲ್ಲಿ ಅಚ್ಚರಿಗೊಂಡಿದ್ದರು. ಹೇಗೂ ಅವರು ಎಲ್ಲದ್ದಕ್ಕೂ ಸನ್ನದ್ಧರಾಗಿದ್ದರು. ಯೆರೂಸಲೇಮಿನಲ್ಲೇ ಅವನ ವಿಚಾರಣೆಯನ್ನು ಮಾಡುವದಾಗಿದ್ದರೇ, ಅದಕ್ಕೂ, ಸಿದ್ಧವಾಗಿದ್ದರು. ಅವರು ಆ ರೋಮಾಯ ಅಧಿಕಾರಿಗೆ - "ನೀನು

ದಯಮಾಡಿ ಅವನನ್ನು ಯೆರೂಸಲೇಮಿಗೆ ಕರೆತರಿಸಬೇಕೆಂದು ಪೌಲನ ಕೇಡಿಗಾಗಿ ಭಿನ್ನಹವನ್ನು ಮಾಡಿದರು'' (ವಚನಗಳು 2ಬಿ, 3ಎ). ಅದು ಒಂದು ಯಥಾರ್ಥವಾದ ಮನವಿಯಾಗಿರಬಹುದು. ದೇಶಾಧಿಕಾರಿಯ ವಿಚಾರಣೆಯನ್ನು ಕೈಸರೈ ಅಥವಾ ಯೆರೂಸ ಲೇಮಿನಲ್ಲಿ ಮಾಡುವ ಹಕ್ಕು ಹೊಂದಿದ್ದರಿಂದ (ಯೋಹಾನ 19:13 ನೋಡಿ) ಯೆರೂಸಲೇಮಿ ನಲ್ಲೆ ಏಕೆ ಮಾಡಬಾರದಿತ್ತು?

"ವಿನಾಯಿತಿ'' ಎಂಬ ಪದವನ್ನು ಗಮನಿಸಿ. ಗ್ರೀಕ್‌ನಲ್ಲಿ ಅದನ್ನು[11] "ಅನುಗ್ರಹ'' ಎಂದಿರುವರು. ಅಲ್ಲಿರುವ ಏಕವಚನವನ್ನು ಕಿಸ್ಟೇಮೇಕರ್‌ರವರು, ಕ್ವಿಡ್ ಪ್ರೊಕ್ಯೂ (ಒಂದು ವಿಷಯಕ್ಕೆ ಬದಲಾಗಿ) ಅಂದರು "ಬದಲು''[12] ಯೆಹೂದ್ಯರು ದೇಶಾಧಿಪತಿಗೆ, "ನಾವು ನಿನಗೆ ಸಹಾಯ ಮಾಡಬೇಕೆಂದಿದ್ದರೆ, ನೀನು ನಮಗೆ ಪೌಲನನ್ನು ನೀಡಿ ಸಹಾಯಿಸು!''[13] ಎಂಬ ಬದಲಾಯಿಸುವ ವ್ಯಾಖ್ಯಾನವನ್ನು ಬಳಸಿದರು.

ಮೇಲ್ನೋಟಕ್ಕೆ ಯೆಹೂದ್ಯರು ನ್ಯಾಯದ ಕೋರಿಕೆಯನ್ನು ಮಾಡಿದ್ದರು. ಆದರೆ ಅಂತ ರಾಳದಲ್ಲಿ ಅನೀತಿಯ ಒಳಸಂಚನ್ನು ಮಾಡಿದ್ದರು. ಅವರು "ಅವನನ್ನು [ಪೌಲನನ್ನು] ಕೊಲ್ಲುವದಕ್ಕಾಗಿ ಹೊಂಚು ಹಾಕಿದ್ದರು'' (ವಚನ 3ಬಿ). ಇನ್ನೊಂದು ಪುನರಾವರ್ತನೆ! ಎರಡು ವರ್ಷಗಳ ಹಿಂದೆ, ಹಿರಿ ಸಭೆಯವರು ರೋಮಾಯದ ಶತಾಧಿಪತಿಗೆ, ಪೌಲನನ್ನು ಹಿಂತಿರುಗಿ ಕಳುಹಿಸಬೇಕೆಂಬ ಮನವಿಯನ್ನು ಮಾಡಿದ್ದರು, ಗೋಪ್ಯವಾಗಿ ಪೌಲನ ಅಂಗರಕ್ಷಕರನ್ನು ಹಿಡಿದು ಅಪೊಸ್ತಲನನ್ನು ಕೊಂದು ಹಾಕುವ ಒಳಸಂಚು ಮಾಡಿದ್ದರು (23:12-15). ಆದರೆ ಈ ಸಮಯದಲ್ಲಿ ಆಯುಧ ಹಿಡಿದವರು[14] ಬೆಟ್ಟದ ಸೀಮೆಯಲ್ಲಿ ಅಡಗಿಕೊಂಡು ಅವರು[15] ಯೆರೂಸಲೇಮಿಗೆ ಸಮೀಪವಾಗುವಾಗ ಕೊಂದು ಹಾಕುವ ಉಪಾಯವನ್ನು ಮಾಡಿದ್ದರು.

ಸಮಯದ ಅಂತರವು ಮನುಷ್ಯನಲ್ಲಿ ಅಡಗಿರುವ ವಿಷವನ್ನು ತೆಗೆದು ಹಾಕಲು ಸಾಧ್ಯವಿದೆ. ಆದರೆ ಅದನ್ನು ಹೃದಯದಲ್ಲಿ ಅಂಟಿಸಿಕೊಂಡಿರುವವನು, ತನ್ನ ಕೋಪವನ್ನು ತೋರ್ಪಡಿಸುವನು (ನೋಡಿರಿ ಎಫೆಸ 4:31). ಯೆಹೂದ್ಯರ ಪ್ರಮುಖರು ಎಡಬಿಡದೆ, ಆ ಕೋಪವನ್ನು ಸಂಗ್ರಹಿಸಿಕೊಂಡಿದ್ದರು, ಅದು ಎಂದಿಗಿಂತಲೂ, ಈಗ ಪ್ರಜ್ವಲಗೊಂಡಿತ್ತು (ಇಬ್ರಿಯ 12:15)![16]

ಯೆಹೂದ್ಯರು ಒಳಸಂಚುಮಾಡಿ ಪೌಲನನ್ನು ಕೊಂದು ಹಾಕುವ ಉಪಾಯವನ್ನು ಫೆಸ್ತನು ಅರಿತಿರಲಿಲ್ಲ,[17] ಆದರೆ ಅವರ ಮಾತಿನಲ್ಲಿ, ಅದನ್ನು ಅರಿತುಕೊಂಡನು.[18]

> ಪೆಸ್ತನು ಅವರಿಗೆ - ಪೌಲನು ಕೈಸರೈಯದಲ್ಲಿ ಕಾವಲೊಳಗಿದ್ದಾನೆ, ನಾನೇ ಬೇಗ ಅಲ್ಲಿಗೆ ಹೊರಟುಹೋಗಬೇಕೆಂದಿದ್ದೇನೆ; ಆದ ಕಾರಣ ನಿಮ್ಮಲ್ಲಿ ಪ್ರಮುಖರು ನನ್ನೊಂದಿಗೆ ಬಂದು ಆ ಮನುಷ್ಯನಲ್ಲಿ ಅನುಚಿತವಾದದ್ದೇನಾದರೂ ಇದ್ದರೆ ಅವನ ಮೇಲೆ ತಪ್ಪು ಹೊರಿಸಲಿ ಎಂದು ಹೇಳಿದನು (ವಚನಗಳು 4, 5).

ಫೆಸ್ತನು, "ಆ ವಿಚಾರಣೆಯನ್ನು ಪುನಃ ಹೊರಗೆಳೆಯುವ ವಿನಾಯಿತಿಯನ್ನು ನೀಡುವನೆಂದು ಹೇಳುತ್ತಿರಬಹುದು, ಆದರೆ ನಾನು ದೇಶಾಧಿಪತಿಯೆಂದು ಅರಿಯುವದನ್ನು ಮರೆಯಬೇಡಿರಿ. ನಿಮ್ಮ ಯೋಜನೆಯ ಹೊರತು ಪಡಿಸಿ, ನನ್ನ ಯೋಜನೆಯ ಪ್ರಕಾರ ವರ್ತಿಸಿರಿ ಎಂದು ಹೇಳಿರಬಹುದು!''

ಇನ್ನೊಂದು ಸಾರಿ ದೇವರ ಅನುಗ್ರಹವಾಯಿತು (ಜ್ಞಾನೋಕ್ತಿ 21:1), ಒಂದು ವೇಳೆ ದೇಶಾಧಿಕಾರಿಯು ಪೌಲನನ್ನು ಯೆರೂಸಲೇಮಿಗೆ ತರಲು ಯೋಚಿಸಿದ್ದರೆ, ಪೌಲನ ಜೀವನ ನಾಶವಾಗುವ ಸಾಧ್ಯತೆಯಿತ್ತು. ಜಾನ್‌ವೆಸ್ಲಿಯವರ ಹೇಳಿಕೆಯಂತೆ, "ದೇವರು ನಿಗೂಢ ವಾದ ಯಾವ ಸಂಗತಿಯಿಂದ ಲೋಕವನ್ನು ಸಂರಕ್ಷಿಸುವನು! ಪೌಲನ ಜೀವಿತವನ್ನು ಸಂರಕ್ಷಿಸುವದು ಫೆಸ್ತನ ಚಕ್ರಾಧಿಪತ್ಯದ ಅವಕಾಶವಾಗಿತ್ತು.''[19]

**ಅದೇ ವಿಧವಾದ ಹಿಂಸೆ (ವಚನಗಳು 6, 7)**

ಫೆಸ್ತನ, "ಈ ಕೊಡುಗೆಗೆ" ಯೆಹೂದ್ಯ ಪ್ರಮುಖರು ಸಮ್ಮತಿಸಿದ ನಂತರ, ಯೆರೂಸಲೇಮಿನ ಸಂದರ್ಶನವನ್ನು ತಟ್ಟನೆ ಮೊಟಕುಗೊಳಿಸಿದನು, "ಅವನು ಅವರಲ್ಲಿ ಎಂಟು ಹತ್ತಕ್ಕಿಂತ[20] ಹೆಚ್ಚು ದಿವಸಗಳು ನಿಲ್ಲದೆ ಕೈಸರೈಯಕ್ಕೆ ಹೋದನು" (ವಚನ 6ಎ). ಅವನ ಸಂಗಡ ಯೆಹೂದ್ಯ ಪ್ರಮುಖರೂ ಹೋದರು (ವಚನ 5).

ಯೆಹೂದ್ಯರಿಗೆ ಸಹಕಾರವನ್ನು ನೀಡಿ ನಿರೂಪಿಸುವದಕ್ಕಾಗಿ, "ಫೆಸ್ತನು, ಹೋಗಿ ಮರುದಿನ ನ್ಯಾಯಸ್ಥಾನದಲ್ಲಿ ಕೂತುಕೊಂಡನು." ಪೌಲನನ್ನು ತರಬೇಕೆಂದು ಅಪ್ಪಣೆಮಾಡಿದನು (ವಚನ 6ಬಿ).[21] ಅವನು ಆ ವಿಚಾರವನ್ನು ತಿಳುವಳಿಕೆಯಿಂದ ನಿರ್ಣಯಿಸಿದನು. ಅವನು ನಂತರ, "ಅವರು ಅಲ್ಲಿಗೆ ಕೂಡಿ ಬಂದಾಗ ನಾನು ಸ್ವಲ್ಪವಾದರೂ ತಡಮಾಡದೆ ಮರುದಿನವೇ ನ್ಯಾಯಸ್ಥಾನದ ಮೇಲೆ ಕೂತುಕೊಂಡು, ಆ ಮನುಷ್ಯನನ್ನು ತರಬೇಕೆಂದು ಅಪ್ಪಣೆಕೊಟ್ಟೆನು" (ವಚನ 17).

ಸಿಪಾಯಿಗಳು ಬಂದು ಪೌಲನನ್ನು ಕರೆದಾಗ, ಅವನಿಗೆ ಅಚ್ಚರಿಯಾಗಿರಬಹುದು, ಅಥವಾ ದಿಗ್ಭ್ರಾಂತನಾಗಿರಬಹುದು. ಈ ಹಿಂದಿನ ದೇಶಾಧಿಪತಿಯು ಅವನನ್ನು ನಿರಪರಾಧಿಯೆಂದು ಘೋಷಿಸಿದ್ದನು (24:26). ಅವನಿಗೆ ಅವಶ್ಯವಿಲ್ಲದ ಇನ್ನೊಂದು ವಿಚಾರಣೆಯು ಪುನಃ ಉಂಟಾಯಿತು!

ಪೌಲನು ಅಲ್ಲಿ ಹಾಜರಾದಾಗ, ಅವನ ಮೇಲಿನ ಆರೋಪಗಳನ್ನು ತಿಳಿಸಲು ಯೆಹೂದ್ಯ ಮುಖಂಡರಿಗೆ ಫೆಸ್ತನು ಅವಕಾಶ ನೀಡಿದನು. ಈ ಸಮಯದಲ್ಲಿ ಯೆಹೂದ್ಯರು ಮಾತಿನಲ್ಲಿ ಚತುರನಾದವನನ್ನು ನೇಮಿಸಿರಲಿಲ್ಲ.[22] ಅದರ ಬದಲಾಗಿ "ಯೆರೂಸಲೇಮಿನಿಂದ ಬಂದಿದ್ದ ಯೆಹೂದ್ಯರು ಅವನ ಸುತ್ತಲು ನಿಂತುಕೊಂಡು ತಾವು ಸ್ಥಾಪಿಸಲಾರದ ಅನೇಕ ದೊಡ್ಡ ದೊಡ್ಡ ತಪ್ಪುಗಳನ್ನು ಪೌಲನ ಮೇಲೆ ಹೊರಿಸಿದರು" (25:7ಎ). ಆ ಅರೋಪಗಳು ಫೆಸ್ತನಿಗೆ ಹೊಸದಾಗಿ ಕಂಡಿರಬಹುದು, ಆದರೆ ಅವುಗಳು ಅಧ್ಯಾಯ 21 ಮತ್ತು 24ರ[23] ಸೋತು ಹೋದ ಗುಂಗಿನ ಅರೋಪಗಳಾಗಿದ್ದವು. ಆದರೆ ಚಿಕ್ಕ ಬದಲಾವಣೆಗಳಿದ್ದವು: ಅದು ರಾಜಕೀಯ ತಿರುವನ್ನು ಹೊಂದಿತ್ತು.[24] ಆದರೆ ಅವರು ಮಾಡಿದ ಅರೋಪಗಳನ್ನು ಪರಿಶೀಲನೆ ಮಾಡಲಾಗಿ "ಅವುಗಳು ಸಾಬೀತುಗೊಳ್ಳಲಿಲ್ಲ" (25:7ಬಿ; 24:13 ನೋಡಿರಿ).

ಈ ಚಿತ್ರಣವನ್ನು ನಾನು ನೋಡುವಾಗ, ದಿಕ್ಕೆಡಿಸುವಂತಿತ್ತು, ಅಚ್ಚರಿಯೂ ಆಯಿತು. ಅವರು ತಮ್ಮ ಅರೋಪಗಳನ್ನು ಹೇಳುವವರಿಗೆ ಕೂತುಕೊಂಡಿರಬೇಕಿತ್ತು (ವಚನ 18). ಅವರು ಒಬ್ಬರ ನಂತರ ಒಬ್ಬರು ನಿಂತು ಆರೋಪ ಮಾಡಬೇಕಿತ್ತು, ಆದರೆ ಅದರ ಬದಲಾಗಿ ತಪ್ಪು ಹೊರಿಸುವವರು ಅವನ ಸುತ್ತಲು ನಿಂತುಕೊಂಡು, ತಮ್ಮಲ್ಲಿದ್ದ ದ್ವೇಷವನ್ನು ಹೊರಸುರಿದರು (ವಚನ 7), ಅದೇ ಸಮಯದಲ್ಲಿ ಕೈಸರೈಯದ ಸ್ಥಳೀಯ ಯೆಹೂದ್ಯರು, "ಇವನು ಇನ್ನು ಮೇಲೆ ಬದುಕಬಾರದು ಎಂದು" ಕೂಗುತ್ತಿದ್ದರು (ವಚನ 24).

ಈ ಒಂದು ಮಾನಸಿಕವಾದ ತುಮುಲದಿಂದ ಯೆಹೂದ್ಯರು ಏನನ್ನು ಸಾಧಿಸಲು ಯತ್ನಿಸಿದರು? ಅವರು ಪೌಲನನ್ನು ತಮ್ಮ ಭ್ರಾಂತಿಯ ಹಾಗೂ ಊಹೆಯ ಆರೋಪಗಳಿಂದ ಪೌಲನನ್ನು ತಪಿತಸ್ಥನೆಂದು ಸಾಬೀತು ಪಡಿಸಲು ಅಸಾಧ್ಯವಾಯಿತು. ಶಿಸ್ತಿನ ಸಿಪಾಯಿಯಾದ ದೇಶಾಧಿಕಾರಿಯನ್ನು ಸಾಕ್ಷ್ಯಾಧಾರಗಳ ಮೂಲಕ ಮನವೊಲಿಸಲು ಪ್ರಯತ್ನಿಸಿದರು.

**ಅದೇ ವಿಧವಾದ ಕೋರಿಕೆ (ವಚನ 8)**

ಈ ಸಮಯದಲ್ಲಾಗಲೇ, ಈ ವಿವಾದವನ್ನು ಪರಿಹರಿಸದೆ ಹಾಗೆ ಮುಂದುವರಿಸಿದ ಫೇಲಿಕ್ಸನ ಕ್ರಮವನ್ನು ಫೆಸ್ತನು ಶಪಿಸುತ್ತಿರಬಹುದು! ಅವನು ತಿಳಿದ ಹಾಗೆ, ರೋಮಾಯರ ನಿಯಮದ ಪ್ರಕಾರ ಯೆಹೂದ್ಯರಲ್ಲಿನ ಸಮಸ್ಯೆಗಳನ್ನು ಬಗೆಹರಿಸುವ ಕ್ರಮವು ಸುಲಭವಾದ ವಿಚಾರವಾಗಿರಲಿಲ್ಲ!

ಗೊಂದಲವನ್ನು ಕ್ರಮ ಪಡಿಸುವ ನಂತರ, ದೇಶಾಧಿಕಾರಿಯು ಪೌಲನಿಗೆ ಮಾತನಾಡುವ ಅವಕಾಶವನ್ನು ಮಾಡಿಕೊಟ್ಟನು. ಪೌಲನ ಪ್ರತಿವಾದವನ್ನು ಲೂಕನು ಚಿಕ್ಕದಾಗಿ ಉಲ್ಲೇಖಿಸಿರುವನು: "ಯೆಹೂದ್ಯರ ಧರ್ಮಶಾಸ್ತ್ರದ ವಿಷಯದಲ್ಲಾಗಲಿ ದೇವಾಲಯದ ವಿಷಯದಲ್ಲಾಗಲಿ ಚಕ್ರವರ್ತಿಯ ವಿಷಯದಲ್ಲಾಗಲಿ ನಾನು ಯಾವ ತಪ್ಪನ್ನೂ ಮಾಡಲಿಲ್ಲವೆಂದು ಪ್ರತ್ಯುತ್ತರ ಹೇಳಿದನು" (ವಚನ 8ಬಿ).[25] ಹಿರೀ ಸಭೆಯವರು ಪೌಲನ ಪಾಪದ ಕುರಿತು: ಅದು ರಾಜದ್ರೋಹ ಹಾಗೂ ಪಾವಿತ್ರ್ಯ ಭಂಗ - ಯೆಹೂದ್ಯರ ಧರ್ಮಶಾಸ್ತ್ರವನ್ನು ಮೀರುವದು, ರಾಜದ್ರೋಹ ಮತ್ತು "ದೇವಾಲಯವನ್ನು" ಹೊಲೆ ಮಾಡುವದು ಪವಿತ್ರಭಂಗ ಹಾಗೂ ರೋಮಾಯರ ದೇಶದಲ್ಲಿ ದಂಗೆ ಎಬ್ಬಿಸುವದದೂ ಆಗಿದೆ.

ಅವರ ಮೂರನೆಯ ಅರೋಪದ ಕುರಿತು, ಒಂದು ಹೊಸ ಪದವನ್ನು ಬಳಸಲಾಗಿದೆ: ಪೌಲನ ಯುದಾಯದ ವಿಚಾರಣೆಯಲ್ಲಿ "ಕೈಸರನ" ರಾಜವೈಭವದ ಹೆಸರನ್ನು ಬಳಸಬಾರದಿತ್ತು, ಆದರೆ ವಚನದಲ್ಲಿರುವ ಅದರ ವ್ಯಾಖ್ಯಾನವು ಆಕಸ್ಮಾತಾಗಿ ಬಳಸಿರುವದಿಲ್ಲ. ಈ ಅಧ್ಯಾಯದಲ್ಲಿ ರೋಮಾ ಚಕ್ರವರ್ತಿಯ ವೈಶಿಷ್ಟಗಳನ್ನು ಕುರಿತು ಒಂಬತ್ತು ಸಾರಿ ಪದಪ್ರಯೋಗ ಮಾಡಲಾಗಿದೆ: "ಕೈಸರನೆಂದು"[26] ಆರು ಸಾರಿ (ವಚನಗಳು 8, 10, 11, 12, 21), "ಚಕ್ರವರ್ತಿ"[27] ಎಂದು ಎರಡು ಸಾರಿ (ವಚನಗಳು 21, 25), ಮತ್ತು "ಒಡೆಯ"[28] ಎಂದು ಒಂದು ಸಾರಿ (ವಚನ 26). ಈಗ ಪಾಲಿಸ್ತೇನಿನಿಂದ ರೋಮಾಯದ ಕಡೆಗೆ ಚಿತ್ರಣವು ಬದಲಾಗುತ್ತಿದೆ, ಸಹೋದ್ಯೋಗಿಗಳಿಂದ ಉನ್ನತ ಮಟ್ಟದ ಮನುಷ್ಯನ ಕಡೆಗೆ ಕೇಂದ್ರೀಕರಿಸಲಾಗುತ್ತಿದೆ (27:24 ನೋಡಿರಿ)!

ಅವರ ಮೂರು ಅರೋಪಗಳಿಗಾಗಿ, ಪೌಲನು "ಆರೋಪ ರಹಿತನು" ಎಂದು ಸಾಬೀತು ಪಡಿಸಿದ್ದರೂ, ಅವನು ಪುನರುತ್ಥಾನದಲ್ಲಿ ನಂಬಿಕೆಯಿಟ್ಟಿದ್ದರಿಂದ "ಅವನನ್ನು ಅಪರಾಧಿಯ" ಸ್ಥಾನದಲ್ಲಿ ಇರಿಸಿದರು (24:20, 21 ನೋಡಿರಿ), ಅವನು ಯೇಸು ಜೀವದಿಂದ ಎದ್ದು ಬಂದನು ಎಂದು ಧೈರ್ಯವಾಗಿ ಘೋಷಿಸಿದನು (25:19)!

### ಅದೇ ವಿಧವಾದ ರಾಜಕೀಯ (ವಚನ 9)

ಪೌಲನು ಅವನ ಮಾತನ್ನು ಮುಗಿಸಿದ ನಂತರ, ಫೆಸ್ತನು ಗಾಬರಿಗೊಂಡು ಗಲಿಬಿಲಿಗೊಂಡನು (ವಚನ 20). ಫೆಲಿಕ್ಸನಂತೆ, ಫೆಸ್ತನು "ಕ್ರಿಸ್ತ ಮಾರ್ಗವನ್ನು ಅರಿಯದವನಾಗಿದ್ದನು" (24:22ಎ). ನಂತರ ಆ ಸಂಗತಿಯನ್ನು ಆಲೋಚಿಸುವಾಗ, ಎರಡೂ ಕಡೆಯವರು ತಿಳುವಳಿಕೆ ಇಲ್ಲದವರಾಗಿದ್ದರು:

> ತಪ್ಪು ಹೊರಿಸುವವರು ನಿಂತುಕೊಂಡು ನಾನು ಭಾವಿಸಿದ್ದ ಅಪರಾಧಗಳಲ್ಲಿ ಒಂದನ್ನಾದರೂ ಅವನ ಮೇಲೆ ಹೊರಿಸದೆ ಅವರ ಮತದ ವಿಷಯದಲ್ಲಿಯೂ ಸತ್ತು ಹೋದಂಥ ಯೇಸುವೆಂಬ ಒಬ್ಬನ ವಿಷಯದಲ್ಲಿಯೂ ಅವನ ಮೇಲೆ ಕೆಲವು ವಿವಾದದ ಮಾತುಗಳನ್ನು ತಂದರು. ಆ ಯೇಸು ಜೀವಿತನಾಗಿದ್ದಾನೆಂದು ಪೌಲನು ಹೇಳಿದನು (25:18, 19).

ದೇಶಾಧಿಪತಿಗೆ, ಎರಡು ಸಂಗತಿಗಳು ಅತಿ ಸ್ಪಷ್ಟವಾಗಿದ್ದವು: ಮೊದಲನೆಯದಾಗಿ, ಅದು ಧಾರ್ಮಿಕ ವಿಚಾರವಾಗಿತ್ತು. ರಾಜಕೀಯ ಸಮಸ್ಯೆಯಾಗಿರಲಿಲ್ಲ. (ಗಲ್ಲಿಯೋನನ ಈ ತೀರ್ಮಾನಕ್ಕೆ ಬಂದಾಗ, ಆ ಅವಸ್ಥೆಯನ್ನು ಹೊರ ಹಾಕಿದ್ದನು [18:14-16], ಫೆಸ್ತನು ಸಹ ಅದನ್ನೇ ಮಾಡಬೇಕಿತ್ತು.) ಎರಡನೆಯದಾಗಿ, ಪೌಲನು ಆಪಾದಿತನಾಗಿರಲಿಲ್ಲ. (ದೇಶಾಧಿಪತಿಯು ನಂತರದಲ್ಲಿ "ಇವನು ಮರಣದಂಡನೆಗೆ ಕಾರಣವಾದದ್ದೇನು ಮಾಡಲಿಲ್ಲವೆಂದು ಒಪ್ಪಿಕೊಂಡನು" [25:25ಎ].) ಈ ಎರಡು ಕಾರಣಗಳು ಆ ಅವಸ್ಥೆಯನ್ನು ಅಂತ್ಯಗೊಳಿಸಬೇಕಿತ್ತು. ಫೆಸ್ತನು ಅದನ್ನು ತನ್ನ ನ್ಯಾಯಸ್ಥಾನದಿಂದ ಪ್ರಕಟಿಸಬೇಕಿತ್ತು, ಅವನು

"ಅಪರಾಧಿ" ಅಲ್ಲವೆಂದು ನಾನು ಪ್ರತಿವಾದ ಮಾಡಿದರೂ ಅವನು ಮಾತ್ರ ಮಾಡಲಿಲ್ಲ.

ದೇಶಾಧಿಪತಿಯು ಗಾದೆಯ ಬಂಡೆ ಹಾಗೂ ಕಠಿಣವಾದ ಸ್ಥಳದ ನಡುವೆ ಇದ್ದನು: ರೋಮಾಯರ[29] ಭಯದಿಂದ, ಪೌಲನನ್ನು ಅಪರಾಧಿ ಎಂದು ಕರೆಯಲು ಹಿಂಜರಿದನು, ಯೆಹೂದ್ಯರ ಭಯದಿಂದ ಪೌಲನನ್ನು ನಿರಪರಾಧಿಯೆಂದು ಕರೆಯಲಿಲ್ಲ. ಅವನು ಆ ಸ್ಥಾನಕ್ಕೆ ಬಂದ ಎರಡು ವಾರಗಳಲ್ಲೇ, ಅವನ ಉನ್ನತವಾದ ತಿಳುವಳಿಕೆಯು ನುಚ್ಚುನೂರಾಗಿತ್ತು. ಅವನ ಹಿಂದಿನ ಹಾಗೂ ನಂತರದ ರಾಜಕೀಯ ವ್ಯಕ್ತಿಗಳಂತೆ, ರಾಜಕೀಯಕ್ಕೆ ಲಾಭವಾಗುವ ಸಂಗತಿಯನ್ನೇ ಊರ್ಜಿತಗೊಳಿಸಿದನು.

ಅವನು ಆಡಳಿತವನ್ನು ನಾಶಮಾಡುವ ಸಾಮರ್ಥ್ಯವನ್ನು ಹೊಂದಿದ್ದ ಯೆಹೂದ್ಯರ ಕಠಿಣ ಮುಖಗಳು ನಡುವೆ ಅವನು ನಿಂತಿರುವಾಗ, ಫೆಸ್ತನು ತನ್ನ ಆಯ್ಕೆಯನ್ನು ನಿರ್ಣಯಿಸಿಕೊಂಡನು. ಅವನ ಪ್ರಗತಿಪರವಾದ ಆಲೋಚನೆಗಳನ್ನು ಗ್ರಹಿಸುವದು ಕಷ್ಟವಲ್ಲ: "ಯೆಹೂದ್ಯರಲ್ಲಿದ್ದ ಧಾರ್ಮಿಕ ಪ್ರಶ್ನೆಯು ಅವನ ಹೃದಯದಲ್ಲಿ ಹಿತವನ್ನು ಉಂಟುಮಾಡಲಿಲ್ಲ. ಅದನ್ನು ಯೆರೂಸಲೇಮಿನಲ್ಲಿದ್ದ ಯೆಹೂದ್ಯರ ಧಾರ್ಮಿಕ ಸ್ಥಳದಲ್ಲಿಯೇ ಇತ್ಯರ್ಥ ಮಾಡುವದು ಉತ್ತಮವೆಂದು ತಿಳಿದನು. ಇದರಿಂದ ಹಿರಿಸಭೆವರು ಸಂತಸಗೊಳ್ಳುವ ಸಾಧ್ಯತೆಯಿತ್ತು, ಮತ್ತು ಅವರೆಲ್ಲರೂ ಇವನಿಗೆ ಬೆನ್ನೆಲುಬಾಗಿ ನಿಲ್ಲುತ್ತಿದ್ದರು. ಇನ್ನೊಂದೆಡೆ, ಈ ವಿಚಾರವು ಖೈದಿಗೆ ಕಸಿವಿಸಿ ಮಾಡುತ್ತಿತ್ತು. ಆದ್ದರಿಂದ ಅವನ ಒಳತಿಗಾಗಿ ನಾನು ನನ್ನ ಕರ್ತವ್ಯದಲ್ಲಿ ಮುಂದುವರಿಯುವೆನು ಎಂಬ ಆತ್ಮ ವಿಶ್ವಾಸವನ್ನು ನೀಡಿದ್ದನು."

ಫೆಸ್ತನು ಪೌಲನ ಕಡೆಗೆ ತಿರುಗಿಕೊಂಡು: "ನೀನು ಯೆರೂಸಲೇಮಿಗೆ ಹೋಗಿ ಅಲ್ಲಿ ಈ ಕಾರ್ಯಗಳ ವಿಷಯವಾಗಿ ನನ್ನ ಮುಂದೆ ವಿಚಾರಿಸಲ್ಪಡುವದಕ್ಕೆ ನಿನಗೆ ಇಷ್ಟವುಂಟೋ?" (ವಚನ 9ಬಿ) ಎಂದು ಕೇಳಿದನು. "*ನನ್ನ ಮುಂದೆ*" ಎಂಬುದು ಪೌಲನಿಗೆ ಪರವಾದ ವಿಚಾರ ಎಂದು ತಿಳಿದರೂ, ಈ ಕಾರ್ಯದ ನಿಮಿತ್ತ ಪೌಲನಿಗೆ ಯಾವ ಲಾಭವೂ ಇರಲಿಲ್ಲ. ಅದು ನಿಯಮಕ್ಕನುಸಾರವಾದ, ತರ್ಕಬದ್ಧವಾದ ವಿಷಯವಾಗಿರದೇ, ತಪ್ಪು ಸಲಹೆಗಳಿಗೆಗನು ಗುಣವಾಗಿತ್ತು. ಒಂದು ವೇಳೆ ಫೇಲಿಕಸ್ಸನು ಕೇವಲ ಕೆಲವರಾದ ಯೆಹೂದ್ಯರ ಮಾತುಗಳಿಗೆ ಸಮ್ಮತಿಸುವವನಾಗಿದ್ದರೆ ಹೊರಗಡೆ ನಿಂತುಕೊಂಡು ಪೌಲನ ಸಾವಿಗಾಗಿ ಕೂಗುತ್ತಿದ್ದ ಸಾವಿರಾರು ಜನರ ಕೋರಿಕೆಗೆ ಸಮ್ಮತಿ ನೀಡುತ್ತಿದ್ದನಲ್ಲವೇ? ಪೌಲನು ಈಗಾಗಲೇ ಎರಡು ಬಾರಿ ನಿರಾಪರಾಧಿ[30] ಎಂದು ಪರಿಗಣಿಸಲ್ಪಟ್ಟಿದ್ದನು. ಹಿಂದಿನ ವಿಚಾರಣೆಯಲ್ಲಿ ತೀರ್ಮಾನ ಮಾಡದೆ ಇದ್ದದ್ದು ತರ್ಕಬದ್ಧವಾಗದೆ ಇರುವಾಗ, ಮೂರನೆಯ ವಿಚಾರಣೆಯ ಉತ್ತಮವಾದ ತೀರ್ಮಾನವನ್ನು ನೀಡಲು ಸಾಧ್ಯವಿತ್ತೆ? ಮುಂದೆ, ಇದ್ದ ಯೆಹೂದ್ಯರ ಉಪಾಯಗಳನ್ನು ಯಾರು ಬಲ್ಲರು? ಪೌಲನು ಪದೇ ಪದೇ ಅವರ ಒಳಸಂಚಿನಿಂದ ಬಳಲಿದನು (9:24; 20:3; 23:14). ಈಗ ಅವರ ಮೇಲೆ ವಿಶ್ವಾಸ ಇಡಬಹುದೇ.

ಫೆಸ್ತನು, "ಯೆಹೂದ್ಯರಿಗೆ *ಒಳಿತನ್ನು ಮಾಡುವ* ಸಲುವಾಗಿ ಈ ನಿರ್ಣಯವನ್ನು ಮಾಡಿದನು" (ವಚನ 9ಎ; ಒತ್ತಿ ಹೇಳಿದ್ದು ನನ್ನದು). ಇಲ್ಲ ಇನ್ನೊಂದು ಪುನರಾವರ್ತನೆಯನ್ನು ಗಮನಿಸುತ್ತೇವೆ: ಮತ್ತೊಂದು ಸಾರಿ ಒಬ್ಬ ರಾಜಕೀಯ ವ್ಯಕ್ತಿಯು, ತನ್ನ ರಾಜಕೀಯ ಲಾಭಕ್ಕಾಗಿ, ಪೌಲನನ್ನು ಮಧ್ಯವರ್ತಿಯನ್ನಾಗಿ ಉಪಯೋಗಿಸಿಕೊಂಡನು.

"ಯೆರೂಸಲೇಮಿಗೆ ಹೋಗಲು *ಇಷ್ಟವುಂಟು?*" ಎಂಬ ಹೇಳಿಕೆಯಿಂದ ಮಾರ್ಗತಪ್ಪ ಬೇಡಿರಿ (ವಚನ 9ಬಿ; ಒತ್ತಿ ಹೇಳಿದ್ದು ನನ್ನದು). ದೇಶಾಧಿಪತಿಯ ನುಡಿಗಳಿಂದ ಪೌಲನು ನಿರ್ಣಯಿಸಬೇಕಿತ್ತು[31] ಎಂಬ ಅರ್ಥವಿಲ್ಲದೆ, ನೀನು ಯೆರೂಸಲೇಮಿಗೆ ಹೋಗುವಿ ಎಂಬ *ದೃಢನಿರ್ಣಯವೇ* ಆಗಿತ್ತು.[32]

## ಇಲ್ಲ – ಒಂದು ನೆನಪು! (25:10-12)

ಈ ಸಂದರ್ಭದಲ್ಲಿ, ನಮ್ಮ ಕಥೆಗೆ ಬಂದು ತಿರುವು ಉಂಟಾಗುತ್ತದೆ. ಪುನರಾ

ವರ್ತನೆಯ ಬದಲು, ನೆನಪು ಮಾಡುವ ಅಂಶವು ಪ್ರಕಟವಾಗಿದೆ, "ದೇವರು ಯಾವಾಗಲೂ ತಪ್ಪಿಸಿಕೊಳ್ಳುವ ಮಾರ್ಗವನ್ನು" ಅನುಗ್ರಹಿಸುವನು ಎಂಬ ದೃಢನಿಶ್ಚಯ (1 ಕೊರಿಂಥ 10:13).

**ದೇವರು ಪೌಲನನ್ನು ಕಾಪಾಡಿದನು**

ಅವನ ಜೀವಿತವು ನೇತಾಡುವ ಸಂದರ್ಭದಲ್ಲಿರುವಾಗ, ಪೌಲನು, ಪಾಲಿಸ್ತೇನಿನ ಬಹು ಪ್ರಭಾವ ಶಾಲಿಯಾದ ಮನುಷ್ಯನನ್ನು ಎದುರ್ಗೊಂಡನು (ಯೋಹಾನ 19:10; ನೋಡಿರಿ) ಅವನು "ಇಲ್ಲ" ಅಂದನು.

> ನಾನು ಚಕ್ರವರ್ತಿಯ ನ್ಯಾಯಸ್ಥಾನದ ಮುಂದೆ ನಿಂತಿದ್ದೇನೆ; ಇಲ್ಲಿಯೇ ನನ್ನ ವಿಚಾರಣೆಯಾಗತಕ್ಕದ್ದು. ಯೆಹೂದ್ಯರಿಗೆ ನಾನು ಅನ್ಯಾಯವೇನೂ ಮಾಡಲಿಲ್ಲ; ಅದು ನಿನಗೂ ಚೆನ್ನಾಗಿ ತಿಳಿದೇ ಇದೆ. ನಾನು ಅನ್ಯಾಯ ಮಾಡಿದವನಾಗಿ ಮರಣದಂಡನೆಗೆ ಕಾರಣವಾದ ಯಾವದನ್ನಾದರೂ ನಡಿಸಿದ್ದಾದರೆ ಮರಣ ದಂಡನೆಯನ್ನು ಬೇಡವೆನ್ನುವದಿಲ್ಲ. ಇವರು ನನ್ನ ಮೇಲೆ ಹೊರಿಸುವ ತಪ್ಪುಗಳಲ್ಲಿ ಒಂದೂ ನಿಜವಲ್ಲದ ಮೇಲೆ ಇವರ ಮೇಲಣ ದಯೆಯಿಂದ ನನ್ನನ್ನು ಒಪ್ಪಿಸಿ ಕೊಡುವದಕ್ಕೆ ಒಬ್ಬರಿಗೂ ಅಧಿಕಾರವಿಲ್ಲ. ನಾನು ಚಕ್ರವರ್ತಿಯ ಎದುರಿನಲ್ಲಿ ಹೇಳಿ ಕೊಳ್ಳುತ್ತೇನೆ ಎನಲು ಫೆಸ್ತನು ತನ್ನ ಸಭೆಯವರ ಸಂಗಡ ಆಲೋಚನೆ ಮಾಡಿದ ಮೇಲೆ ಪೌಲನಿಗೆ - ಚಕ್ರವರ್ತಿಯ ಎದುರಿನಲ್ಲಿ ಹೇಳಿಕೊಳ್ಳುತ್ತೇನೆ ಅಂದಿಯಲ್ಲಾ, ಚಕ್ರವರ್ತಿಯ ಬಳಿಗೆ ಹೋಗ ಬೇಕು ಎಂದು ಹೇಳಿದನು (ವಚನಗಳು 10, 11).

ಇಲ್ಲಿ ರೋಮಾಯದ ದೇಶಾಧಿಪತಿ ಹಾಗೂ ರೋಮಾಯದ ಹಕ್ಕುದಾರನ ನಡುವಿನ ಎಳೆದಾಟವನ್ನು ಗಮನಿಸುತ್ತೇವೆ - ದೇವರ ಸಹಾಯದಿಂದ ಹಕ್ಕುದಾರನು ಗೆದ್ದನು. ಪೌಲನ ಮಾತುಗಳನ್ನು ಲಿವಿಂಗ್ ಬೈಬಲ್ ಅನುವಾದದಲ್ಲಿ:

> ಇಲ್ಲ ನಾನು ಚಕ್ರವರ್ತಿಯ ಮುಂದೆ ವಿಚಾರಣೆಗೆ ಸಿದ್ಧನಾಗಿದ್ದೇನೆ. ನಾನು ಯಾವ ಅಪ ರಾಧವನ್ನು ಮಾಡಿದವನಲ್ಲ. ಮರಣಕ್ಕೆ ಯೋಗ್ಯವಾದ ಅಪರಾದವಿದ್ದರೆ ನಾನು ಸಾಯಲು ಸಿದ್ಧನಿರುವೆನು! ನಾನು ನಿರಪರಾಧಿಯಾಗಿದ್ದರೆ, ನೀನಾಗಲಿ ಅಥವಾ ಇತರರಾಗಲೀ, ಇವರ ಕೈಗೆ ನನ್ನನ್ನು ಕೊಲ್ಲಲ್ಲು ಒಪ್ಪಿಸಲು, ಯಾವ ಅಧಿಕಾರವನ್ನು ಹೊಂದಿರುವದಿಲ್ಲ. ನಾನು *ಕೈಸರನಿಗೆ ಫಿರಿಯಾದಿ ಸಲ್ಲಿಸುವೆನು.* (ಒತ್ತಿ ಹೇಳಿದ್ದು ನನ್ನದು.)

ರೋಮಾಯದ ಹಕ್ಕುದಾರನಿಗೆ ನ್ಯಾಯ ದೊರಕದೆ ಹೋದರೆ, ಕೈಸರನಿಗೆ ಮೊರೆ ಹೋಗುವ ಹಕ್ಕನ್ನು ಹೊಂದಿರುತ್ತಿದ್ದನು. ಆದರೆ ಕೆಲವು ಅಕ್ಷೇಪಗಳಿದ್ದವು (ಕೊಲೆ ಅಥವಾ ಕಳ್ಳತನದಲ್ಲಿ ಸಿಕ್ಕಿಕೊಂಡವರಿಗೆ ಈ ಹಕ್ಕು ಊರ್ಜಿತವಾಗುವದಿಲ್ಲ), ಇದು ಒಬ್ಬ ರೋಮಾ ಹಕ್ಕುದಾರನ ಮೂಲ ಹಕ್ಕಾಗಿತ್ತು.[33] ರೋಮಾದ ನಾಗರೀಕನು, *"ಕೈಸರನ ಅಪ್ಪೊಲೋ"*[34] ಎಂದು ಹೇಳಿದಾಕ್ಷಣ, ನ್ಯಾಯಾಧಿಪತಿಯು ಆ ವಿಚಾರವನ್ನು ಕೈಬಿಡಬೇಕಿತ್ತು.

ಪೌಲನ ಫಿರಿಯಾದಿಯ ಸಮಯದಲ್ಲಿ, ನೀರೋ ಎಂಬವನು ಕೈಸರನಾಗಿದ್ದನು. ಕ್ರಿ.ಶ. 54ರಲ್ಲಿ ಸಿಂಹಾಸನ ಏರಿದ್ದನು. ನೀರೋ ರಕ್ತ ಸುರಿಸಿದವನ್ನು ಎಂದು ಚರಿತ್ರೆಯಲ್ಲಿ ಹೇಳುತ್ತದೆ, ಅಂತವನ ಕೈಗೆ ಪೌಲನು ವಶವಾದನು. ನಿರೋ ಚಕ್ರವರ್ತಿಯ ಪ್ರಥಮ ಐದು ವರ್ಷಗಳ ಅವಧಿಯಲ್ಲಿ (ಸೆನೇಕ[35] ಹಾಗೂ ಇತರರ ಪ್ರಭಾವಕ್ಕೆ ಒಳಗಾದಾಗ) ಅದು "ಬಂಗಾರದಂತ ಅವಧಿ" ಯಾಗಿತ್ತು ಎಂದು ರೋಮಾಯರು ಅರಿತ್ತಿದ್ದರು. ಕ್ರಿ.ಶ. 59ರ ಘಟನೆಯು ಕ್ರಿ.ಶ. 64 ಮತ್ತು 65ರ[36] ಘಟನಾವಳಿಗಳಿಗೆ ಎಚ್ಚರಿಕೆಯನ್ನು ನೀಡಿತು.

ಇಲ್ಲಿ ಫೆಸ್ತನಿಗೆ ನಿಜವಾದ ಅಚ್ಚರಿ ಉಂಟಾಯಿತು. ಫಿರಿಯಾಧಿಯನ್ನು ರೋಮಾಕ್ಕೆ ಸಲ್ಲಿಸಲು ಹಕ್ಕುದಾರರಾಗಿದ್ದರು. ಅವಮಾನ ಹಾಗೂ ಅನಾನುಕೂಲದ ದೆಸೆಯಿಂದ ಮೇಲಿನ ಅಧಿಕಾರಕ್ಕೆ ಒಳಗಾಗುತ್ತಿದ್ದರು. ಸಿಪಾಯಿಗಳ ಜೊತೆಯಲ್ಲಿ ಮುಖ್ಯ ಪಟ್ಟಣಕ್ಕೆ ಪ್ರವೇಶ ಮಾಡುವದನ್ನು ಯಾವ ಮನುಷ್ಯನು ಇಷ್ಟಪಡುತ್ತಿರಲಿಲ್ಲ. ಅವರ ಪ್ರಯಾಣದಲ್ಲಿ ಉಂಟಾಗುವ ಆಯಾಸವನ್ನು ಸಹಿಸಿಕೊಂಡು, ತಮ್ಮ ವಿಚಾರಣೆಯ ದಿನವು ಬರುವವರೆಗೆ, ರೋಮಾಪುರದಲ್ಲಿ ಅವರು ಕಾಯ್ದು ಕೊಂಡಿರಬೇಕಿತ್ತು (28:30 ನೋಡಿರಿ).

ಗೊಂದಲದಲ್ಲಿ ಸಿಲುಕಿದ ಫೆಸ್ತನು "... ತನ್ನ ಸಭೆಯವರ ಸಂಗಡ ಆಲೋಚನೆ"[37] ಮಾಡಿದನು (25:12ಎ). ಪೌಲನು ಅವನ ನಿಯಂತ್ರಣದಲ್ಲಿಯೇ ಇದ್ದನು ಎಂದು ಜನರು ಸ್ಪಷ್ಟಪಡಿಸಿದ್ದರು - ದೇಶಾಧಿಪತಿಯು ರೋಮಾಯದ ಪ್ರತಿನಿಧಿಯಾಗಿದ್ದರಿಂದ, ಅವನಿಗೆ ಆಯ್ಕೆಯ ಅವಕಾಶವಿರಲಿಲ್ಲ. ಮುಖ ಕೆಂಪು ಮಾಡಿಕೊಂಡ, ಫೆಸ್ತನು ತನ್ನ ನ್ಯಾಯ ಮಂಡಳಿಗೂ ಹಿಂದಿರುಗಿ ಪುರಾತನ ಸಿದ್ಧಾಂತವನ್ನು ಪ್ರಕಟಿಸಿದನು: ಚಕ್ರವರ್ತಿಯ ಎದುರಿನಲ್ಲಿ ಹೇಳಿಕೊಳ್ಳುತ್ತೇನೆ ಎಂದು ಹೇಳಿದಿಯಲ್ಲಾ, ಚಕ್ರವರ್ತಿಯ ಬಳಿಗೆ ಹೋಗಬೇಕು ಎಂದು ಹೇಳಿದನು. *"ಕೈಸರೆಮ್ ಅಪೆಲೆಸ್ತಿ; ಅಡ್ ಕೈಸರೆಮ್ ಐಬಿಸ್"* (ವಚನ 12ಬಿ).

ಮಿಶ್ರಣವಾದ ಉದ್ವೇಗದಿಂದ ಫೆಸ್ತನು ಈ ಮಾತುಗಳನ್ನು ಆಡಿರಬಹುದು. ಬಹುಶಃ ಈ ವಿಧವಾದ ಅನುಭವವನ್ನು ಅವನು "ಯಾರಿಂದಲೂ" ಅನುಭವಿಸಿರಲಾರನು ಅವನ ಕಾರ್ಯಬಾರಕ್ಕೆ ಧಕ್ಕೆಯಾದ ವಿಧದಲ್ಲಿ ವ್ಯವಹರಿಸಬೇಕಿತ್ತು. ಹಾಗೂ ಅವನು ನೆಮ್ಮದಿಯನ್ನು ಹೊಂದಿರಬಹುದು; ಅತಿ ಶೀಘ್ರದಲ್ಲೆ ಈ ಭಾರವಾದ ಹಾಗೂ ಹಿಂಸೆಯ ವಿಚಾರದ ಹೊಣೆಯನ್ನು ಕಳಚಿಕೊಳ್ಳುವವನಾಗಿದ್ದನು!

"ಪೌಲನು ಚಕ್ರವರ್ತಿಯ ಎದುರಿನಲ್ಲಿ ಹೇಳಿಕೊಳ್ಳುವ ಪರ್ಯಂತರ ತನ್ನನ್ನು ಕಾಯಬೇಕೆಂದು" ಕೇಳಿಕೊಂಡಾಗ "ನಾನು ಚಕ್ರವರ್ತಿಯ ಬಳಿಗೆ ಕಳುಹಿಸುವ ತನಕ" ಅವನನ್ನು ಕಾಯುವದಕ್ಕೆ ಅಪ್ಪಣೆಕೊಟ್ಟನು ಎಂದು ಹೇಳಿದನು (ವಚನ 21)! ಕೊನೆಗೆ, ಪೌಲನು ರೋಮಿಗೆ ಪ್ರಯಾಣಿಸಿದನು!

ಪೌಲನ ಫಿರಿಯಾದಿಯ ಕುರಿತು ಯೋಚಿಸುವಾಗ, ಅನೇಕ ಪ್ರಶ್ನೆಗಳು ಉದ್ಭವಿಸುತ್ತವೆ: ಪೌಲನು ಕೈಸರನ ಬಳಿಯಲ್ಲಿ ಪ್ರತಿವಾದ ಮಾಡಲು ಸಿದ್ಧನಿರುವಾಗ, ಈ ಹಕ್ಕನ್ನು ಈ ಹಿಂದೆಯೇ ಏಕೆ ಬಳಸಲಿಲ್ಲ (ಕೈಸರೆಯ ಎರಡು ವರ್ಷದಸೆರೆವಾಸವನ್ನು ದೂರವಿರಸಬಹುದಿತ್ತು)? ಈ ಸಮಯದಲ್ಲೇ ಏಕೆ ತನ್ನ ಹಕ್ಕನ್ನು ಈ ರೀತಿ ಚಲಾಯಿಸಿದನು?

ಇಲ್ಲಿಯವರೆಗೂ, ಯೆರೂಸಲೇಮಿಗೆ ಹಿಂದಿರುಗುವಂತ ವಿಚಾರವನ್ನು ಫೆಸ್ತನು ಮಾತನಾಡಿದನು, ಆಗ ಪೌಲನು ತಾನು ರೋಮಾಯಕ್ಕೆ ಹೋಗುವ ಅನೇಕ ಆಯ್ಕೆಗಳನ್ನು ಹೊಂದಿದ್ದನು. ಕೈಸರನ ಬಳಿಗೆ ಹೋಗುವ ಒಂದು ದ್ವಾರ ತೆರೆಯಲಾಗಿತ್ತು, ಅದು ಬಯಸಲಾರದ ದ್ವಾರವಾಗಿತ್ತು.[38] ಪೌಲನು ರೋಮಾಯಕ್ಕೆ ಖೈದಿಯಾಗಿ ಹೋಗಲು ಇಚ್ಛಿಸಲಿಲ್ಲ.[39] ಆದರೆ ಸ್ವತಂತ್ರನಾಗಿ ರೋಮಾಯವನ್ನು ಪ್ರವೇಶಿಸಲು ಇಚ್ಚಿಸಿದನು - ಅವನ ಇಚ್ಛೆಯ ಸ್ಥಳಕ್ಕೂ ಹಾಗೂ ಸುವಾರ್ತೆ ಸಾರುವದಕ್ಕೂ ಸ್ವತಂತ್ರನಾಗಲು ಇಚ್ಛಿಸಿದನು.[40] ಫೇಲಿಕ್ಸನು ಪೌಲನಿಗೆ ಎರಡು ವರ್ಷಗಳ ಕಾಲ ಸೆರೆವಾಸವನ್ನು ನೀಡಿದ್ದರಿಂದ, ಯಾವುದೇ ಸಮಯದಲ್ಲಿ ಅವನು ಬಿಡುಗಡೆಯಾಗುವ ಸಾಧ್ಯತೆಯಿತ್ತು. ಅವನನ್ನು ಬಿಡುಗಡೆ ಮಾಡದೆ ಫೇಲಿಕ್ಸನು ದೇಶವನ್ನು ಬಿಟ್ಟು ಹೋದದ್ದರಿಂದ, ಅವನ ಮುಂದೆ ಇದ್ದ ಒಂದು ಬಾಗಿಲು ಮುಚ್ಚಿಕೊಂಡಿತ್ತು.[41]

ಫೆಸ್ತನು, ದೇಶಾಧಿಪತಿಯಾದಾಗ - ಯೆಹೂದ್ಯರ ಕೆಟ್ಟತನವನ್ನಾಗಲೀ, ಕ್ರೈಸ್ತರ ಒಳಿತನ್ನಾಗಲೀ ಅರಿತಿರಲಿಲ್ಲ - ಇತರೆ ಬಾಗಿಲುಗಳು ಸಹ ಮುಚ್ಚಲ್ಪಟ್ಟವು. ಅಂತಿಮವಾಗಿ, ದೇಶಾಧಿಪತಿಯು ಪೌಲನನ್ನು ಯೆರೂಸಲೇಮಿಗೆ ಕರೆದೊಯ್ಯಬೇಕು ಎಂದು ತಿಳಿಸಿದಾಗ, ಒಂದೇ ಒಂದು ಬಾಗಿಲು ತೆರೆದುಕೊಂಡಿತು: ಕೈಸರನ ಮುಂದೆ ಅಫೀಲು ಹೋಗುವ

ಸಂದರ್ಭ ಆ ಬಾಗಿಲು ಮುಚ್ಚುವದೊರೊಳಗಾಗಿ ಪೌಲನು ತ್ವರೆಪಟ್ಟು ಹೋದನು.

ಕೈಸರನಲ್ಲಿಗೆ ಅಫೀಲು ಹೋಗುವ ವಿಚಾರದಲ್ಲಿ ಪೌಲನು ತಪ್ಪೆಸಗಿದನೇ? ಯಾಕಂದರೆ ಅರಸನಾದ ಅಗ್ರಿಪ್ಪನು ಫೆಸ್ತನಿಗೆ, "ಈ ಮನುಷ್ಯನು ಚಕ್ರವರ್ತಿಯ ಎದುರಿನಲ್ಲಿ ಹೇಳಿ ಕೊಳ್ಳುತ್ತೇನೆಂದು ಹೇಳದೆ ಹೋಗಿದ್ದರೆ ಇವನನ್ನು ಬಿಡಬಹುದಾಗಿತ್ತು ಎಂದು ಹೇಳಿದನು" (26:32ಬಿ)? ಹೌದು ಅಗ್ರಿಪ್ಪನು ಈ ವ್ಯಾಖ್ಯಾನವನ್ನು ಹೇಳಿದ್ದಾಗ್ಯೂ, ಅದನ್ನು ನಂತರದಲ್ಲಿ ಹೇಳಿ ದನು (25:13, 14).[42] ಒಂದು ವೇಳೆ ಪೌಲನು ದೇಶಾಧಿಪತಿಯೊಂದಿಗೆ, ಫಿರಿಯಾದಿಯ ಯೋಚನೆಯನ್ನು ನಿಷ್ಫಲಗೊಳಿಸಿದ್ದರೆ, ಮುಂದೆ ಬರಲಿಕ್ಕೆ ಇದ್ದಂಥ ಅಗ್ರಿಪ್ಪ ಮತ್ತು ಬೆರ್ನಿಕೆಯವರ ಮುಂದೆ ಪೌಲನ ಶ್ರದ್ಧಾಂಜಲಿಯನ್ನು ಲೂಕನು ಓದಬೇಕಿತ್ತು.[43]

ಇನ್ನೊಂದು ಸಾರಿ ದೇವರು ನೀಡಿದ ಅನುಗ್ರಹದ ಹಸ್ತವನ್ನು ಗಮನಿಸುತ್ತೇವೆ. ಕೈಸರನ ಮುಂದೆ ಪಿರಿಯಾದಿ ಸಲ್ಲಿಸುವೆನೆಂದು ಹೇಳಿದ ಕಾರಣ, ಪೌಲನು ಅರಸನಾದ ಅಗ್ರಿಪ್ಪನಿಗೆ ಸುವಾರ್ತೆಯನ್ನು ಸಾರುವ ಅವಕಾಶ ಉಂಟಾಯಿತು (9:15; 26:1). ಕೈಸರನಿಗೆ ಫಿರಿಯಾದಿ ಸಲ್ಲಿಸುವ ಕಾರಣದಿಂದ, ಅವನು ದೇಶವನ್ನು ಬಿಡುವವರೆಗೆ ರೋಮಾಯರಿಂದ ಸಂರಕ್ಷಣೆಯನ್ನು ಪಡೆದನು (25:21 ನೋಡಿರಿ). ಈ ಕಾರಣದಿಂದ ಸುವಾರ್ತೆಯ ಪ್ರಭಾವವನ್ನು ಕೈಸರನ ಅರಮನೆಗೆ ಪ್ರಚುರ ಪಡಿಸಿದನು (ಅಪೊಸ್ತಲರ ಕೃತ್ಯಗಳು 9:15; ಫಿಲಿಪ್ಪಿ 4:22). ಪಿರಿಯಾಧಿಯನ್ನು ರೋಮಾಯದವರಿಗೆ ತಿಳಿಸುವ ಕಾರಣದಿಂದ, ಪೌಲನು ನೀರೋ ಚಕ್ರವರ್ತಿಗೆ ಸುವಾರ್ತೆಯನ್ನು ತಲುಪಿಸಿದನು (ಅಪೊಸ್ತಲರ ಕೃತ್ಯಗಳು 27:24). ಕೈಸರನಿಗೆ ಅಫೀಲು ಹೋಗುವ ಆಲೋಚನೆಯನ್ನು ದೇವರೇ "ಒತ್ತಾಯ ಪೂರ್ವಕವಾಗಿ" ನೀಡಿರಬಹುದು (28:19), ಕ್ರೈಸ್ತತ್ವವು ನಿಯಮ ಬಾಹಿರವಲ್ಲವೆಂದು ಸಾಬೀತು ಪಡಿಸುವದಕ್ಕಾಗಿ ಪೌಲನು ಶ್ರೀಮಂತ ನ್ಯಾಯಾಲಯದ ಮುಂದೆ ಹಾಜರಾದನು.

## ದೇವರು ನಮ್ಮನ್ನು ಕಾಯುತ್ತಾನೆ

ಈ ಕಥೆಯು ನಮಗೆ ಬಹಳ ಪಾಠಗಳನ್ನು ಕಲಿಸುತ್ತದೆ. ದೇವ ಜನರನ್ನು ದೇವರು ಕಾಯುವಂಥ ವಿಚಾರವು ಅದರಲ್ಲಿ ಒಂದಾಗಿರುತ್ತದೆ. ಈ ಹಿಂದೆ 1 ಕೊರಿಂಥ 10:13ನೇ ವಚನವನ್ನು ಉಲ್ಲೇಖಿಸಿರುವೆನು:

> ಮನುಷ್ಯರು ಸಹಿಸಬಹುದಾದ ಶೋಧನೆಯೇ ಹೊರತು ಬೇರೆ ಯಾವದೂ ನಿಮಗೆ ಸಂಭವಿಸಲಿಲ್ಲ. ದೇವರು ನಂಬಿಗಸ್ಥನು; ನಿಮ್ಮ ಶಕ್ತಿಯನ್ನು ಮೀರುವ ಶೋಧನೆಯನ್ನು ನಿಮಗೆ ಬರಗೊಡಿಸದೆ ನೀವು ಅದನ್ನು ಸಹಿಸುವದಕ್ಕೆ ಶಕ್ತರಾಗುವಂತೆ ಶೋಧನೆ ಯಾಗುತ್ತಲೇ ತಪ್ಪಿಸಿಕೊಳ್ಳುವ ಮಾರ್ಗವನ್ನು ಸಿದ್ಧಮಾಡುವನು.[44]

ಶೋಧನೆಗಳು ಹಾಗೂ ತಾಪತ್ರಯಗಳ ಕುರಿತು ಪೌಲನು ಬಹಳವಾಗಿ ಹೇಳಿರುವನು - ತಾಪತ್ರಯಗಳು ಯಾರನ್ನೂ ಹೊರತು ಪಡಿಸಿರುವದಿಲ್ಲ. ತಾಪತ್ರಯಗಳು ಒಂದೇ ವಿಧವುಗಳಾ ಗಿರದೆ; ಈ ವಿಧವಾದ ತಾಪತ್ರಯಗಳನ್ನು ಹಿಂದಿನ ಜನರೂ ಸಹ ಅನುಭವಿಸಿದ್ದರು. ತಾಪತ್ರಯಗಳು ಬರುವಾಗ ದೇವರೇ ಅದನ್ನು ನಿಯಂತ್ರಿಸುವನೆಂದು ಒಬ್ಬ ಕ್ರೈಸ್ತನು ದೃಢ ವಿಶ್ವಾಸದಿಂದ ಇರಬೇಕು! ನಮ್ಮ ಅಧ್ಯಯನಗಳಲ್ಲಿ ಇದರ ಸಾಕ್ಷಾದ್ಧಾರಗಳನ್ನು ಪದೇ ಪದೇ ತಿಳಿದಿದ್ದೇವೆ; ದೇವರು ಪೌಲನಿಗೆ ನೀಡಿದ ಅನುಗ್ರಹಗಳನ್ನು ನೋಡಿದ್ದೇವೆ. "ಅವನ ಸೆರೆ ಬಂಧನ, ಅವನಿಂದ ಹಣ ಪಡೆಯುವ ಆಸೆ, ರಾಜಕೀಯ ಕೆಟ್ಟ ಮನೋಭಾವನೆಗಳು, ಮತ್ತು ದ್ವೇಷ ಇಂಥಹ ಪರಿಶೋಧನೆಗಳ ಮೂಲಕ, ದೇವರ ನಂಬಿಕೆಗೆ ಹಾಗೂ ಆತನ ಯೋಜನೆಗೆ ಒಳಪಡುವದರಲ್ಲಿ ತನ್ನ ಮಹತ್ವದ ಉದ್ದೇಶಗಳನ್ನು ದೇವರು ಈಡೇರಿಸುವನು."[45]

1 ಕೊರಿಂಥ 10:13 ಶೋಧನೆಗಳ ಕುರಿತು ಎರಡು ವಾಗ್ದಾನಗಳನ್ನು ಪೌಲನು ತಿಳಿಸಿರುವನು. ಮೊದಲನೆಯದಾಗಿ, ದೇವರು ಶೋಧನೆಗಳನ್ನು ತಂದರು, ಅವುಗಳನ್ನು

ಮಿತಿಗೊಳಿಸಿರುವನು:[46] "ದೇವರು ನಂಬಿಗಸ್ತನಾಗಿರುವದರಿಂದ ಶೋಧನೆಯಲ್ಲಿ ಬಿದ್ದು ಹೋಗ ದಂತೆ ಕಾಯುವನು." ನೀವು ಸಹಿಸಲಾದಂಥ ಶೋಧನೆಯನ್ನು ನೀಡುವದಿಲ್ಲ. ದೇವರು ನಿನ್ನ ಬಲವನ್ನು ಹಾಗೂ ಬಲಹೀನತೆಯನ್ನು ಅರಿತಿರುವನು. "ನಿಮ್ಮ ಶಕ್ತಿಯನ್ನು ಮೀರುವ ಶೋಧನೆಯನ್ನು ನಿಮಗೆ ಬರಗೂಡಿಸದೆ ನೀವು ಅದನ್ನು ಸಹಿಸುವದಕ್ಕೆ ಶಕ್ತರಾಗು ವಂತೆ ಶೋಧನೆಯಾಗುತ್ತಲೇ ತಪ್ಪಿಸಿಕೊಳ್ಳುವ ಮಾರ್ಗವನ್ನು ಸಿದ್ಧಮಾಡುವನು" (NCV).

"ಇದನ್ನು ನಾನು ಎಂದಿಗೂ ಸಹಿಸಲಾರೆ" ಎಂಬುದಾಗಿ ತನ್ನ ಪಾಪವನ್ನು ಕುರಿತು ನೆಪಹೇಳುವ ಕ್ರೈಸ್ತನ ಬಗ್ಗೆ ಕೇಳಿರುವಿರಾ? ಅದು ದೇವರ ನಂಬಿಗಸ್ತಿಕೆಗೆ ವಿರೋಧವಾದ ಹೇಳಿಕೆಯಾಗಿರುತ್ತದೆ! ಆ ವ್ಯಕ್ತಿಗೆ ಅದು "ಭಾರವಾದ ಸಂಗತಿಯಾಗಿದ್ದರೆ," ದೇವರು, ಅವನಿಗೆ ಸಹಿಸಲಾರದ ಶೋಧನೆಯನ್ನು ನೀಡಿರಬಹುದು - ಮತ್ತು ದೇವರು ನಂಬಿಗಸ್ತನಲ್ಲ, ಅದನ್ನು ನಾವು ಏಕೆ ಸಹಿಸಿಕೊಳ್ಳುತ್ತಿರುವದಿಲ್ಲವೆಂದರೆ - ಅದು ಸಹಿಸಲಾರದ ಕಾರಣವಲ್ಲ "ಪೌಲನು ನಮ್ಮೆಲ್ಲರಿಗಿಂತ ಅಧಿಕವಾದ ಶೋಧನೆಯನ್ನು ಎದುರಿಸಿದನು, ಆದಾಗ್ಯೂ ಅವನು ಯಾವದೇ ದೂರನ್ನು ನೀಡಲಿಲ್ಲ, ಮತ್ತು ಕರ್ತನೆ ನಾನು ಸಹಿಸಲಾರದ್ದನ್ನು ನೀಡಿದ್ದಿ" ಎಂದು ಹೇಳಲಿಲ್ಲ!

ಅಧ್ಯಾಯ 25ರಲ್ಲಿ ಎರಡನೆಯ ವಾಗ್ದಾನವನ್ನು ವಿವರವಾಗಿ ನೀಡಲಾಗಿದೆ: ದೇವರು ನಮ್ಮ ಸಮಸ್ಯೆಗಳಿಗೆ ಮಿತಿಯನ್ನು ನೀಡುವದು ಮಾತ್ರವಲ್ಲದೆ; ಅವುಗಳನ್ನು ಜಯಿಸುವ ಹಾದಿಯನ್ನು ತೋರಿಸುವನು: "ಶೋಧನೆಯೊಂದಿಗೆ ತಪ್ಪಿಸಿಕೊಳ್ಳುವ ಮಾರ್ಗವನ್ನು ತೋರಿಸುವನು, ಅದರ ಮೂಲಕ ನೀನು ಸಹಿಸಿಕೊಳ್ಳುವ ಸಾಧ್ಯತೆಯೂ ಇರುತ್ತದೆ." "ತಪ್ಪಿಸಿಕೊಳ್ಳುವ ಮಾರ್ಗ" ಎಂಬುದನ್ನು ಗ್ರೀಕ್ ಅನುವಾದದಲ್ಲಿ "ಹೊರಗಿನ ದಾರಿ" ಎಂದಿದೆ. ಮೊದಲ ಶತಮಾನದಲ್ಲಿದ್ದ ಸೈನಿಕರು ತಾವು ವೈರಿಗಳಿಂದ ಸುತ್ತುವರಿಸಲ್ಪಟ್ಟಾಗ, ಇದಕ್ಕಿದ್ದ ಹಾಗೆ ಒಂದು ಸಣ್ಣ ಹಾದಿಯನ್ನು ಕಂಡುಕೊಂಡು ಅದರಿಂದ ತಪ್ಪಿಸಿಕೊಳ್ಳುವ ವಿಚಾರಕ್ಕೆ ಈ ಹೇಳಿಕೆಯನ್ನು ನೀಡುತ್ತಿದ್ದರು!

"ತಪ್ಪಿಸಿಕೊಳ್ಳುವ ಮಾರ್ಗದ" ವಿಚಾರದಲ್ಲಿ ಮೂರು ಗುಣಗಳು ಅಡಕವಾಗಿವೆ. ಒಂದು ತಾಪತ್ರಯದ ಸ್ವಭಾವ. ತಾಪತ್ರಯದ ಅನುಗುಣವಾಗಿ "ತಪ್ಪಿಸಿಕೊಳ್ಳುವದು" ಯೆರೂಸಲೇಮಿನಲ್ಲಿ ಪೌಲನನ್ನು ಕೊಲ್ಲುವ ಒಳಸಂಚನ್ನು ಅರಿತು, ಅದನ್ನು ರೋಮಾಯದ ಸದ್ಗುಣದ ಶತಾಧಿಪತಿಗೆ ವರದಿ ಸಲ್ಲಸುವದಕ್ಕಾಗಿ, ಪೌಲನು ಹೋದದ್ದು "ತಪ್ಪಿಸಿಕೊಳ್ಳುವ ಮಾರ್ಗವಾಯಿತು." ಯೆರೂಸಲೇಮಿನ ಕೈಸರನಿಗೆ ಫಿರಿಯಾಧಿ ಸಲ್ಲಿಸುವದಕ್ಕಾಗಿ ಬಂದದ್ದು ಸಹ ತಪ್ಪಿಸಿಕೊಳ್ಳುವ ಮಾರ್ಗವಾಯಿತು. ಎರಡನೆಯದಾಗಿ, ತಾಪತ್ರಯ ಹೊಂದಿರುವವರ ಸಾಮರ್ಥ್ಯವನ್ನೂ ದೇವರು ಅರಿತಿರುವನು. ದೇವರು ಶಾಧನೆಗಳನ್ನು ಹಾಗೂ ತಪ್ಪಿಸಿಕೊಳ್ಳುವ ಮಾರ್ಗವನ್ನು ತಾನೇ ಹೊಲಿದು ಕೊಡುವನು.[47] ಪೌಲನ "ತಪ್ಪಿಸಿ ಕೊಳ್ಳುವ ಮಾರ್ಗ" ಅದು ನನಗೆ ಸಮಂಜಸವಾಗುತ್ತಿರಲಿಲ್ಲ; ಏಕೆಂದರೆ ಅವನು ರೋಮಾಯದ ಹಕ್ಕುದಾರನಾಗಿದ್ದನು. ಮತ್ತು ನಾನು ಆಗಿರುವದಿಲ್ಲ. ಮೂರನೆಯ ತಪ್ಪಿಸಿಕೊಳ್ಳುವ ಮಾರ್ಗವು ತಾಪತ್ರಯದಲ್ಲಿರುವವನ ಅನುಗುಣವಾಗಿ ದೇವರು ಹೊಂದಿರುವ ಯೋಜನೆ ಹಾಗೂ ಉದ್ದೇಶ ದಲ್ಲಿ ಅವಲಂಭಿತವಾಗಿರುತ್ತದೆ. KJVಯಲ್ಲಿ "ತಪ್ಪಿಸಿಕೊಳ್ಳುವದಕ್ಕಾಗಿ ಮಾರ್ಗ" ಎಂದಿದೆ, ಆದರೆ NASBಯಲ್ಲಿ "ತಪ್ಪಿಸಿಕೊಳ್ಳುವದಕ್ಕೆ ಸಿದ್ಧವಾಗಿರುವ ಮಾರ್ಗ" ದೇವರ ಯೋಜನೆಗೆ ಅನುಗುಣವಾದ ಮಾರ್ಗ.

ತಾಪತ್ರಯಗಳ ಕುರಿತು ಮಗ್ನರಾಗಿರುವಾಗ, ದೇವರು ತೋರುವ ತಪ್ಪಿಸಿಕೊಳ್ಳುವ ಮಾರ್ಗವನ್ನು ಕಾಣಲು ಸಾಧ್ಯವಿಲ್ಲ. "ಅದು ಯಾವಾಗಲು ನಾವು ಕಲ್ಪಿಸಿಕೊಂಡಿರುವಂಥ ಮಾರ್ಗವಾಗಿರುವದಿಲ್ಲ." ಕೈಸರೆಯು, ಪೌಲನ "ತಪ್ಪಿಸಿ ಕೊಳ್ಳುವ" ಮಾರ್ಗ ಅವನ ಇಚ್ಛೆಯಂತಿರದೇ; ಅವನು ರೋಮಾಯಕ್ಕೆ ಸ್ವತಂತ್ರನಾಗಿ ಪ್ರವೇಶಿಸಬೇಕೆಂದು ಇಚ್ಛಿಸಿದನೇ ವಿನಃ ಖೈದಿಯಾಗಿ ಹೋಗಲು ಇಚ್ಛಿಸಲಿಲ್ಲ. ಹೇಗೂ "ಕೈಸರನ ಮುಂದಿನ ಅಫೀಲು ದೇವರ

ಮಾರ್ಗವಾಗಿದ್ದರೂ, ಅದು ಪೌಲನ ಆಯ್ಕೆಯಾಗಿತ್ತು ಎಂಬುದನ್ನು ಅರಿತಿರುವದಿಲ್ಲ. ನಾವು ತಾಪತ್ರಯಗಳಿಂದ ಪರಿತಾಪ ಪಡುವಾಗ, ದೇವರ ಮಾರ್ಗದ ಮೂಲಕ ಅವುಗಳನ್ನು ಪರಿಹರಿಸಿಕೊಳ್ಳಲು ಪ್ರಯತ್ನಿಸಬೇಕು. ಒಂದು ವೇಳೆ ನಮ್ಮ ಉತ್ತಮವಾದ ಕಾರ್ಯಗಳಿಗಾಗಿ ದೇವರು ಅಸಂಕಷ್ಟಗಳನ್ನು ನಮಗೆ ನೀಡಿರಬಹುದು" (ಯಾಕೋಬ 1:2-4) ಇದು ಸತ್ಯಾಂಶ ವಾಗಿದ್ದರೆ, "ನಮಗೆ ಬಂದೊದಗುವ ಕಷ್ಟಗಳಲ್ಲಿ, ತಪ್ಪಿಸಿಕೊಳ್ಳುವ ಮಾರ್ಗದಿಂದ" ಹಾದು, ದೇವರ ಬಲವನ್ನೆ ಅವಲಂಭಿಸುತ್ತೇವೆ![48]

ನಿಮ್ಮ ಮನಸ್ಸುಗಳಲ್ಲಿ ಎರಡು ಸತ್ಯಗಳನ್ನು ಚಿತ್ರಿಸಿಕೊಳ್ಳಿರಿ; ಸಂಕಷ್ಟವು ಬರುವಾಗ, ನೀವು ಸಿದ್ಧರಾಗಿರಬೇಕು: (1) ತಪ್ಪಿಸಿಕೊಳ್ಳುವ ಮಾರ್ಗವು ಯಾವಾಗಲೂ ಸಿದ್ಧವಾ ಗಿರುತ್ತದೆ - ಆದರೆ ನಾವು ಅದಕ್ಕಾಗಿ ತವಕ ಪಡಬೇಕು. ದೇವರ ವಾಗ್ದಾನವು ಈರೀತಿ ಇರುವದರಿಂದ ದೇವರು, ಪೌಲನ ಬಗ್ಗೆ ಕಾಳಜಿ ವಹಿಸಿದನು; ಆತನು ನಮಗೂ ಕಾಳಜಿ ವಹಿಸುವನು! (2) ಜಯದ ಸಾಧ್ಯತೆಯಿದೆ - ಅದನ್ನು ನಾವು ರೂಢೀಕರಿಸಿಕೊಳ್ಳಬೇಕು. ನಾವು ತೆರೆದ ಸ್ಥಳದಲ್ಲಿ ಹೋಗಬೇಕೆಂದು ದೇವರು ಒತ್ತಾಯಪಡಿಸುವದಿಲ್ಲ. ನಾವು ಆ ಅವಕಾಶವನ್ನು ಸದುಪಯೋಗ ಮಾಡಿಕೊಳ್ಳಬೇಕು. ನಾವು ದೇವರ ಕಾರ್ಯಕ್ಕೆ ನಮ್ಮನ್ನು ದೀನತೆಯಿಂದ ಒಪ್ಪಿಸಿಕೊಟ್ಟರೆ, ಸಂಕಷ್ಟಗಳು ನಮ್ಮಿಂದ ಉತ್ತಮವಾದದ್ದನ್ನು ಪಡೆಯಲಾರೆವು.

## ಮುಕ್ತಾಯ

ಫೇಲಿಕ್ಸನ ಮತ್ತು ಫೆಸ್ತನ ನಡುವಿನ ವ್ಯತ್ಯಾಸಗಳನ್ನು ಈ ಕಥೆಯಿಂದ ಅವಲೋಕನ ಮಾಡಿಕೊಳ್ಳೋಣ. ಪೌಲನು ಫೇಲಿಕ್ಸನಿಗೆ ಬೋಧಿಸಿದಾಗ ಅವನು "ಭಯಗೊಂಡು ನಡುಗಿದನು" (24:25; NASB, KJV) ಪೌಲನು ಫೆಸ್ತನಿಗೆ ಬೋಧಿಸಿದಾಗ, ಆ ದೇಶಾಧಿಪತಿಯು "ನಿರಾಶವಾದಿಯಾದನು" (25:20) ಮತ್ತು ಆ ಎಲ್ಲಾ ಸಂಗತಿಗಳು ಅಸಂಬದ್ಧ ಎಂದು ತಿಳಿದನು (25:27). ನಂತರ ಅವನು "ನೀನು ಮರುಳಾಗಿದ್ದಿ; ನೀನು ಬಹಳವಾಗಿ ಮಾಡುವ ಶಾಸ್ತ್ರ ವಿಚಾರವು ನಿನ್ನನ್ನು ಮರುಳು ಗೊಳಿಸುತ್ತದೆ" ಎಂದು ಹೇಳಿದನು (26:24ಬಿ).

ಫೆಲಿಕ್ಸನ ದೃಷ್ಟಾಂತದಲ್ಲಿ, ಸ್ಪರ್ಷಕ್ಕೆ ಸಿದ್ಧವಿರುವ ಹೃದಯವು ಇದ್ದಾಗ್ಯೂ, ದೇವರ ಕಡೆ ತಿರುಗಿಕೊಳ್ಳುವ ಮನಸ್ಸು ಇಲ್ಲದೆ ಇದ್ದದ್ದರಿಂದ ಇದು ಅಘಾತಕರವಾಯಿತು. ಸ್ಪರ್ಶಿಸಲಾಗದಂಥ ಹೃದಯವನ್ನು ಫೆಸ್ತನು ಹೊಂದದೆ ಇದ್ದದ್ದರಿಂದ ಅದು ಸಹ ಅಘಾತಕರವಾಯಿತು. ಪಾಪ ಅರಿಯುವಿಕೆ ಇಲ್ಲದೆ ಇರುವ ಜ್ಞಾನ ಮತ್ತು ವಿವಿಧ ಆಲೋಚನೆ ಗಳನ್ನು ಹೊಂದಿರುವವನು ಸುವಾರ್ತೆಯು, ಮರುಳಾದ ವ್ಯಕ್ತಿಯ ಮಾತು ಎಂದು ತಿಳಿಯುತ್ತಾರೆ (ಎಫೆಸ 4:19; ಇಬ್ರಿಯ 3:13; 1 ಕೊರಿಂಥ 2:14).

ನಿಮ್ಮಲ್ಲಿ ಯಾರೂ ಸಹ ಫೇಲಿಕ್ಸನಂತಾಗಾಲೀ ಅಥವಾ ಫೆಸ್ತನಂತಾಗಲೀ ಇರಬಾರದೆಂದು ನಾನು ಪ್ರಾರ್ಥಿಸುತ್ತೇನೆ. ನಿಮ್ಮ ಹೃದಯಗಳು ಇನ್ನು ಮೃದುವಾಗಿದೆಯೇ? ನಿನ್ನನ್ನು ನೀನು ದೇವರಿಗೆ ಸಮರ್ಪಿಸಿಕೊಳ್ಳಬೇಕೆಂಬ ಅರಿವು ನಿನಗಾದರೆ, ಹಿಂಜರಿಯದೆ ಅದಕ್ಕೆ ಒಳಗಾಗು? ನಿನ್ನ ನಿತ್ಯತ್ವವನ್ನು ನೀನೇ ರೂಪಿಸಿಕೊಳ್ಳಬಹುದು!

## ಪ್ರಸಂಗದ ಟಿಪ್ಪಣಿ

ಅಧ್ಯಾಯ 25ರಿಂದ ಒಂದೇ ಒಂದು ಪ್ರಸಂಗವನ್ನು ಮಾಡಲಿಚ್ಚಿಸಿದರೆ, *ವಾರೆನ್ ವೆರ್ಸಿಯವರ ಹೊಸ ಒಡಂಬಡಿಕೆಯ*[49] ವಿವರಣೆಯ ಮುಖ್ಯಾಂಶಗಳಲ್ಲಿ ಮೂರು ಮುಖ್ಯ ಅಂಶಗಳನ್ನು ತಿಳಿಸಲಾಗಿದೆ: (1) ಕೈಸರನಲ್ಲಿ ಪೌಲನ ಅಪೀಲು (ವಚನಗಳು 1-12);

(2) ಪೌಲನು ಫೆಸ್ತನನ್ನು ಗೊಂದಲ ಪಡಿಸಿದನು (ವಚನಗಳು 13-22); (3) ಪೌಲನು ಚಕ್ರವರ್ತಿಯನ್ನು ಸಂಧಿಸಿದನು (ವಚನಗಳು 23:27).

ಅಧ್ಯಾಯ 25 ಹಾಗೂ 26ನ್ನು ಒಂದೇ ಪ್ರಸಂಗ ಮಾಡುವದಾದರೆ, ವೆರ್ಸ್ಬಿಯವರ, "ಪ್ರತಿವಾದ ಮಾಡಿದ ಪೌಲ" ಎಂಬುದರ ವಿವಿಧ ಭಾಗವನ್ನು ಗಮನಿಸಿರಿ: (1) ಸಂಧಾನ: ಫೆಸ್ತನು ಹಾಗೂ ಯೆಹೂದ್ಯ ಪ್ರಮುಖರ ನಡುವಿನ ಸಂಧಾನ (25:1-12); (2) ಸಲಹೆ: ಫೆಸ್ತನು ಮತ್ತು ಅಗ್ರಿಪ್ಪನು (25:13-27); (3) ಮುಖಾಮುಖಿ ಸಂಧಿಸುವಿಕೆ: ಫೆಸ್ತನು ಅಗ್ರಿಪ್ಪನು, ಮತ್ತು ಪೌಲನು (26:1-32).[50]

---

ಟಿಪ್ಪಣಿಗಳು

[1]ಅಮೇರಿಕದ ದೂರ ದರ್ಶನದ ಕಾರ್ಯಕ್ರಮಗಳನ್ನು ಪುನರಾವರ್ತಿಸುವದಕ್ಕೆ "ರಿರನ್" ಎನ್ನುವರು. ಪುನರಾವರ್ತನೆಗೊಳ್ಳುವ ವಿಚಾರಗಳಿಗೆ ಈ ಪದವನ್ನು ಬಳಸಬಹುದು. [2]ಸತ್ಯವೇದವನ್ನು ಪದೇಪದೇ ಓದಿ ಧ್ಯಾನಿಸಬೇಕು. [3]ಅವನು ಕೆಟ್ಟವನಾದ ಅಲ್ಬಿನೋಸನನ್ನು ಹಿಂಬಾಲಿಸಿದನು. ಅವನು ಮೃಗತ್ವದ ಆಡಳಿತ ನೀಡಿದ್ದರಿಂದ, ಕ್ರಿ.ಶ. 66ರಲ್ಲಿ ಯೆಹೂದ್ಯರು ದಂಗೆ ಎದ್ದರು. [4]ಅವರೇ ಫೇಲಿಕ್ಸ ನನ್ನು ಅಧಿಕಾರದಿಂದ ಇಳಿಸಿದ್ದರು. [5]"ಸೈತಾನನು ನಿಮಗೆ ಕಠಿಣವಾದ ಸಮಯವನ್ನು ಎದುರು ಮಾಡಿದಾಗ" ಎಂಬ ಪಾಠದಲ್ಲಿರುವ 4:6ರ ಟಿಪ್ಪಣಿಯನ್ನು *ಅಪೊಸ್ತಲರ ಕೃತ್ಯಗಳು, 1ನೇ* ಪುಸ್ತಕದಲ್ಲಿ ನೋಡಿರಿ. [6]ಸುಣ್ಣ ಹಚ್ಚಿದ ಗೋಡೆಯನ್ನು ದೇವರು ಕೆಡವಿ ಹಾಕಿದನು. ಅವನು ಪ್ರಭಾವಿ ವ್ಯಕ್ತಿಯಾಗಿದ್ದರಿಂದ ಯಾಜಕರಲ್ಲಿ ಮುಂದವರೆದಿರಬಹುದು. ನಂತರ ಕೊಲ್ಲಲ್ಪಟ್ಟನು (ಅಪೊಸ್ತಲರ ಕೃತ್ಯಗಳು 23:2, 3ರ ಟಿಪ್ಪಣಿ ನೋಡಿರಿ "ತಿರಸ್ಕರಿಸಿದ ಯೆರೂಸಲೇಮು" ಈ ಪುಸ್ತಕದಲ್ಲಿ ನೋಡಿರಿ). [7]ಅಪೊಸ್ತಲರ ಕೃತ್ಯದಲ್ಲಿ ಇಷ್ಮಾಯೇಲನ ಎಂಬ ಹೆಸರಿರುವದಿಲ್ಲ, ಯೋಸೆಫಸನು ಈ ಮಾಹಿತಿ ನೀಡಿರುವನು. [8]"ಅಪರಾಧ ನಿರ್ಣಯ" ಗ್ರೀಕ್ (Simon J. Kistemaker, *New Testament Commentary: Exposition of the Acts of the Apostles* [Grand Rapids, Mich.: Baker Book House, 1990], 875). [9]ಫೆಸ್ತನು ಒಳ್ಳೆಯ ಪ್ರಭಾವ ತೋರಿರಬಹುದು: (1) ದೇಶಾಧಿಪತಿಯ ಮಾತುಗಳಿಗೂ ಲೂಕನ ಉಲ್ಲೇಖಕ್ಕೂ ವ್ಯತ್ಯಾಸವಿರುವದಿಲ್ಲ, ಅವು ಸಹಾಯಕವಾಗಿವೆ (2) ಯೆಹೂದ್ಯರ ವರದಿಯಲ್ಲಿ ಪೌಲನ ಮೇಲಿನ ಅಸೂಯೆ ವ್ಯಕ್ತವಾಗಿತ್ತು. [10]ವಚನ 24ರಲ್ಲಿ, "ಯಾವುದೇ ಪ್ರತಿವಾದವಿಲ್ಲದೆ ನಾನು ಅವನನ್ನು ಶಿಕ್ಷೆಗೆ ಒಳಪಡಿಸಬೇಕು" ಎಂದು ವೆಸ್ಟರ್ನ್ ಲೇಖನಲ್ಲಿರುತ್ತದೆ.

[11]KJV, NASB ಯಲ್ಲಿನ (ಚಾರಿನ್) "ಎಂಬುದನ್ನು ಉಪಕಾರ" ಎನ್ನಲಾಗಿದೆ (ವನ 9). [12]ಕಿಸ್ಟೇ ಮೇಕರ್, 862. [13]ಹೊಸ ಅಧಿಕಾರಿಯ ಮೇಲೆ ಅಧಿಕ ಒತ್ತಡ ಹೇರಲಾಯಿತು, ಫೆಸ್ತನಿಗೆ ಲಂಚನೀಡಿರ ಬಹುದು (24:26) ಆದ್ದರಿಂದ ಪೌಲನ ಕೊಲ್ಲುವಿಕೆಯ ಶಪಥವನ್ನು ಈಡೇರಿ, ಬಹುದುದಾಗಿತ್ತು. [14]ಶಪಥ ಮಾಡಿದವರಲ್ಲಿ ಕೆಲವರು ಎಲ್ಲರೂ ಅಲ್ಲಿ ಹಾಜರಾಗಿರಬಹುದು (23:12, 13). [15]ಕ್ಲೌದ್ಯದ ಲೂಸ್ಯನಂತೆ, ಫೆಸ್ತನು ಅನೇಕ ಸಿಪಾಯಿಗಳನ್ನು ನೀಡಿರಬಹುದು (23:23). [16]ಅಧ್ಯಾಯ 23ರ ಒಳಸಂಚಿನಲ್ಲಿ ನಾಲ್ವತ್ತು ಜನರಿದ್ದರು, ಅದು ಈಗ ಹಿರೀ ಸಭೆಗೆ ವರ್ಗಾಯಿಸಲಾಗಿ ಈಗ ಅವರೇ ಒಳಸಂಚು ಮಾಡಿದ್ದರು. [17]ಲೂಸ್ಯನು ಯೆರೂಸಲೇಮಿನ ಶತಾಧಿತಿಯಾಗಿ ಮುಂದುವರಿದಿದ್ದನು. ಎಡು ವರ್ಷಗಳ ಹಿಂದೆ ಪೌಲನ ಕುರಿತಾದ ಪಿತೂರಿಯನ್ನು ಫೆಸ್ತನಿಗೆ ಹೇಳರಬಹುದು, ಇದರಿಂದ ದೇಶಾಧಿಪತಿಯು ಪಿತೂರಿಯ ಅರಿವನ್ನು ಹೊಂದಿದ್ದನು, ಅಗ್ರಿಪ್ಪನೊಂದಿಗೆ ಮಾತನಾಡುವಾಗ ವೈಯಕ್ತಿಕವಾಗಿ ಈ ವಿಚಾರವನ್ನು ತಿಳಿಸಿರಬಹುದು (ವಚನಗಳು 14-21). [18]ಆ ಅನುಭವಿಯಾದ ಹೊಸ ಅಧಿಕಾರಿಯಿಂದ ಉಪಯೋಗ ಪಡೆಯಲು ಯತ್ನಿಸಿದರು ಗಲ್ಲಿಯೋನ ಸಂಗಡ, ಯೆಹೂದ್ಯರು ಮಾಡಿದ ವಿಚಾರವನ್ನು ಹೋಲಿಸಿರಿ ಅಪೊಸ್ತಲರ ಕೃತ್ಯಗಳು 18. [19]Quoted in James Burton Coffman, *Commentary on Acts* (Austin, Tex.: Firm Foundation Publishing House, 1976), 467. [20]KJV ಯು ಇತರ ಮೂಲಗಳ ಆಧಾರದ ಮೇಲೆ "ಹತ್ತಕ್ಕಿಂತ ಹೆಚ್ಚುಯೆಂದು" ಹೇಳಿದೆ "ಎಂಟು ಅಥವಾ ಹತ್ತುಕ್ಕಿಂತ" ಹೆಚ್ಚನ್ನು ಅರಿಸಿಕೊಳ್ಳಲು ಸಾಧ್ಯವಿಲ್ಲ, ಆದರೆ ಈ ವ್ಯತ್ಯಾಸವು ಅಷ್ಟು ಪ್ರಾಮುಖ್ಯವೇನಲ್ಲ.

[21]"ನ್ಯಾಯಮಂಡಳಿ" "ನ್ಯಾಯಸ್ಥಾನ" (KJV ನೋಡಿರಿ) ರೋಮಾಯರ ಅಧಿಕಾರದ ಸಂಕೇತ, ಅದು ಹೊರಾಂಗಳದಲ್ಲಿ ಇರಬಹುದು. ಯೋಹಾನ 18:28 ಹೋಲಿಸಿ. 18:12ರ ಟಿಪ್ಪಣಿಯನ್ನು "ಕರ್ತನು, ಯಾವಾಗಲೂ ತನ್ನ ಮಾತನ್ನು ನೆರವೇರಿಸುವನು" ಎಂಬ ಪಾಠದಲ್ಲಿ *ಅಪೊಸ್ತಲರ*

*ಕೃತ್ಯಗಳು, 4ನೇ* ಪುಸ್ತಕದಲ್ಲಿ ನೋಡಿರಿ, [22]24:1 ತೆರ್ತಲನನ್ನು ಸಹ ಕರೆದೊಯ್ದಿದ್ದರು, ಅವರು ಅವನಿಗೆ ನೀಡಿದ ಹಣದಲಾಭ ಉಂಟಾಗಲಿಲ್ಲ. [23]ವಚನ 8ರಲ್ಲಿ ಇದು ಪೌಲನ ಪ್ರತ್ಯುತ್ತರವಾಗಿದೆ. ವಿವರಕ್ಕೆ ಅಪೊಸ್ತಲರ ಕೃತ್ಯಗಳು 21:28ರ ಟಿಪ್ಪಣಿಯನ್ನು "ಮತ್ತು ಅವರು ಕಲ್ಪಿಸಿಕೊಂಡರು" ಎಂಬ ಪಾಠದಲ್ಲಿ ನೋಡಿರಿ; ಅಪೊಸ್ತಲರ ಕೃತ್ಯಗಳು 24:10, 11ರ ಟಿಪ್ಪಣಿಯನ್ನು "ಪೌಲನ ನ್ಯಾಯವಿಚಾರಣೆ" ಎಂಬ ಪಾಠದಲ್ಲಿ ನೋಡಿರಿ. [24]ಈ ದೃಶ್ಯ ಮತ್ತು 17:5-8ರ ಮಧ್ಯ ಇರುವ ಹೋಲಿಕೆಯನ್ನು ಗಮನಿಸಿ. [25]ಪೌಲನ ಮೇಲಿನ ಅರೋಪಕ್ಕೆ ಕುರುಹುಗಳು ಇಲ್ಲದೆ ಇದ್ದದ್ದರಿಂದ, ಪೌಲನು ತಾನೇ "ಅಪರಾಧಿ" ಎಂದು ಕೊಳ್ಳಬೇಕೆಂದು ಯೆಹೂದ್ಯರು ತಿಳಿದರು, ಆದರೆ ಪೌಲನು "ನಿರಪರಾಧಿ ಯಾಗಿದ್ದನು" ಆಗ ಫೆಸ್ತನು ತಕ್ಷಣವೇ ಅವನು ನಿರಪರಾಧಿಯೆಂದು ಪ್ರಕಟಿಸಬೇಕಿತ್ತು. [26]ಸೀಸರ್, ಎಂದರೆ ಗ್ರೀಕ್‌ನಲ್ಲಿ "ಕೈಸರನು" ಜೂಲಿಯಸ್ ಸೀಸರನ ವಂಶದ ಹೆಸರು, ನಂತರ ರೋಮಾಯರ ಮುಖ್ಯನಾಮವಾಯಿತು. [27]ಗ್ರೀಕ್ ಎಂಪರರ್ ಎಂದರೆ ಸೆಬಸ್ತೊಸ್ ಲ್ಯಾಟೀನ್ ಭಾಷೆಯ "ಅಗಸ್ತಸ್" "ಅಗಸ್ತಸ್" ಅಂದರೆ ಶ್ರೀಮಂತ "ಗೌರವಾನ್ವಿತ" ಎಂಬ ಅರ್ಥ. ರೋಮಾ ಚಕ್ರವರ್ತಿ ಅದನ್ನು ಒಪ್ಪಿಕೊಂಡಿದ್ದನು (ಲೂಕ 2:1). [28]ಗ್ರೀಕ್ ಭಾಷೆಯ "ಲಾರ್ಡ್" ಎಂಬ ಪದವನ್ನು (ರೋಮನ್ನರು ಬಳಸಿದರೆ ಹೊರತು ಕ್ರೈಸ್ತರಾ ಗಲಿ ಅಥವಾ ಯೆಹೂದ್ಯರಾಗಲಿ ಬಳಸಲಿಲ್ಲ) "ಕುರಿಯೋಸ್" ದೈವತ್ವ ಕೆಲವು ಚಕ್ರವರ್ತಿಗಳು ಈ ಪದನಾಮವನ್ನು ಒಪ್ಪಿಕೊಳ್ಳದಿದ್ದರೂ, ನೀರೂ ಒಪ್ಪಿಕೊಂಡಿದ್ದನು. ದೇವರ ಮಗುವಿಗೆ ಒಬ್ಬನು "ಪ್ರಭು" ಇದ್ದಾನೆ (ಎಫೆಸ 4:5). [29]ಪೌಲನು ರೋಮಾಯದ ಕೆಲವು ಹಕ್ಕುದಾರನಾಗಿದ್ದನು. ಒಂದು ವೇಳೆ ಫೆಸ್ತನು ರೋಮಾ ಹಕ್ಕುದಾರನನ್ನ ಶಿಕ್ಷಿಸಿದನು ಎಂಬ ವರದಿಯನ್ನು ರೋಮಾಯರು ಕೇಳಿದ್ದರೆ, ಅವನಿಗೆ ಕಠಿಣಶಿಕ್ಷೆಯಾಗುತ್ತಿತ್ತು. [30]ಅಮೇರಿಕೆಯಲ್ಲಿ (ಮತ್ತು ಇತರೆ ದೇಶಗಳಲ್ಲಿ) "ಡಬಲ್ ಜಿಯೋಪಾರ್ಡಿ" ಎಂಬ ಪದವನ್ನು ಬಳಸುವರು. ಒಂದು ಅಪರಾಧದಲ್ಲಿ ಒಬ್ಬನು ನಿರಪರಾಧಿಯೆಂದು ಕಂಡು ಬಂದರೆ, ಅವನನ್ನು ಪುನಃ ಶಿಕ್ಷಿಸಬಾರದು ಎಂಬ ನಿಯಮ. "ಟ್ರೈಪಲ್ ಜಿಯೋಪಾರ್ಡಿಯನ್ನು" ಸಹ ಫೆಸ್ತನು ನಂಬಲಿಲ್ಲ.

[31]Ernst Haenchen, quoted in I. Howard Marshall, *The Acts of the Apostles,* The Tyndale New Testament Commentaries, gen. ed. R. V. G. Tasker (Grand Rapids, Mich.: Wm. B. Eerdmans Publishing Co., 1980), 384. [32]ಇದು ಪೌಲನ ಸಹಜವಾದ ಪ್ರತ್ಯುತ್ತರ, ಯಾರೂ ನನ್ನನ್ನು ಅವರಿಗೆ ಒಪ್ಪಿಸಲು ಸಾಧ್ಯವಿಲ್ಲ [ಯೆಹೂದ್ಯ ಪ್ರಮುಖರೂ ಸಹ] (ವಚನ 11) ಇಲ್ಲ, "ವಂದನೆ" ಎಂದು ಹೇಳಲು ಪೌಲನು ಅವಕಾಶವನ್ನು ಪಡೆದಿದ್ದರೆ, ನಾನು ಯೆರೂಸಲೇಮಿಗೆ ಹೋ ಗುವದಿಲ್ಲ ಎಂಯ ಹೇಳಬಹುದಿತ್ತು, ಮತ್ತು ಕೈಸರನ ಬಳಿ ಅಪೀಲು ಹೋಗುವ ಅಗತ್ಯವಿರಲಿಲ್ಲ (28:19). [33]ಮೂಲದಲ್ಲಿ, ಜನರಿಗೆ ಅಪೀಲು ಹೇಳುತ್ತಿದ್ದರು, ನಂತರ ರೋಮಾಯದ ಸೆನೇಟನಿಗೆ, ಅವನು ಜನರಿಗಾಗಿ ಪ್ರತಿನಿಧಿಯಾಗಿದ್ದನು, ಆನಂತರ ಚಕ್ರವರ್ತಿಗೆ, ಅವನು ಜನರ ಪ್ರತಿನಿಧಿಯಾಗಿದ್ದನು. [34]ಮೂಲ ವಾಕ್ಯದಲ್ಲಿ ಲ್ಯಾಟೀನ್ ಭಾಷೆಗೆ ಸಮನಾದ ಎರಡು ಪದಗಳಿವೆ: ಸಿವಿಸ್ ರೋಮಾನಸ್ ಸಮ್, ಪ್ರಮೋಕ ಅಡ್ ಕೇಸರೆಮ್. [35]ಸೆನೇಕನು ಗಲ್ಲಿಯೋನನ ಸಹೋದರ, ಅಪೊಸ್ತಲರ ಕೃತ್ಯಗಳು 18:12ರ ಟಿಪ್ಪಣಿ *ಅಪೊಸ್ತಲರ ಕೃತ್ಯಗಳು, 2ನೇ* ಪುಸ್ತಕವನ್ನು ನೋಡಿರಿ. [36]F. F. Bruce, *The Book of Acts,* rev. ed., The New International Commentary on the New Testament (Grand Rapids, Mich.: Wm. B. Eerdmans Publishing Co., 1988), 454. ಕ್ರಿ.ಪೂ. 64/65, ನೀರೋ ಕ್ರೈಸ್ತರಿಗೆ ಹಿಂಸೆ ನೀಡಲು ಆರಂಭಿಸಿದನು. [37]ಗ್ರೀಕ್‌ನಲ್ಲಿ ಸರಳವಾಗಿ "ಹಿರಿಸಭೆ" ಎಂದಿದೆ (ನೋಡಿರಿ KJV). ಯೆಹೂದ್ಯ ಹಿರಿ ಸಭೆಯೊಂದಿಗೆ ಮಿಶ್ರನ ಮಾಡಬೇಡಿರಿ. "ಹಿರಿ ಸಭೆ"ಯವರು ದೇಶಾಧಿಪತಿ ಸಹಾಯಕರು. ಅಧಿಕಾರಿಯು ಎಲ್ಲವನ್ನು ಅರಿಯದವನಾಗಿರುವದರಿಂದ, ಕೆಲವರು "ಸಲಹಾ ಸಮಿತಿಗಳನ್ನು" ರಚಿಸಿರುವರು (ಅಥವಾ ಕ್ಯಾಬಿನೆಟ್) ಸರ್ಕಾದಲ್ಲಿರುವ ಅನುಭವಿಗಳು ಅಲ್ಲಿರುವರು. [38]28:19ರ "ಕೈಸರನ ಬಳಿಗೆಅಪೀಲು ಹೋಗುವ ಒತ್ತಾಯಕ್ಕೊಳಗಾಗಿದ್ದೇನೆ" ಎಂಬ ಪೌಲನ ಮಾತನ್ನು ಗಮನಿಸಿರಿ. [39]ಫಿಲಿಪ್ಪಿ 1:12-17ರ ಪ್ರಕಾರ ಪೌಲನ ಸೆರೆವಾಸದ ಕುರಿತು ರೋಮಾಪುರದ ಸಹೋದರರಲ್ಲಿ ಮಿಶ್ರ ಪ್ರತಿಕ್ರಿಯೆ ಉಂಟಾಗಿತ್ತು. ಕೆಲವರು ಅವನ ಬಂಧನದ ಕುರಿತು ನಾಚಿಕೆಗೊಂಡರು. [40]ಪೌಲನು ರೋಮಾಯಕ್ಕೆ ಹೋಗುವ ಕುರಿತು ಯೇಸುವಿನ ವಾಗ್ದಾನವನ್ನು ಈಡೇರಿಸಿದನು (23:11). ಅದರರ್ಥವೇನೆಂದರೆ ಬಿಡುಗಡೆಗೊಂಡ ನಂತರ ಪ್ರಯಾಣಿಸುವ ಕುರಿತಾಗಿತ್ತು, ಈ ಹಿಂದೆ ಪೌಲನಿಗೆ ಉಂಟಾದ ಆತ್ಮೀಕ ಎಚ್ಚರಿಕೆಯ ಕುರಿತು ತಪ್ಪು ಭಾವನೆಉಂಟಾಗಿ (20:22-25); ಯೇಸುವಿನ ವಾಗ್ದಾನವನ್ನು ಸಹತಪ್ಪರ್ಥ ಮಾಡಿಕೊಂಡಿರಬಹುದು.

[41]ಪೌಲನು ನಿರಪರಾಧಿಯಾಗಿದ್ದರಿಂದ ಬಿಡುಗಡೆಗೊಳಿಸಬೇಕಾಗಿದ್ದರೂ ಫೇಲಿಕ್ಸನು ಪಾಲಿಸ್ಟೇ ನನ್ನು ತೊರೆದ ನಂತರ ಬಿಡುಗಡೆಗೊಳ್ಳ ಬಹುದಿತ್ತು. ದೇಶಾಧಿಪತಿಯು ಹೊರಟುಹೋದ ನಂತರ ಕ್ಷೇಮನಿಯಾ ಮುಖ್ಯ ಪಾತ್ರವು ಯಾವುದೇ ಕೈದಿಯನ್ನು ಬಿಡುಗಡೆ ಮಾಡಬಹುದಿತ್ತು. ಅದಕ್ಕೆ

ಅಧಿಪತಿಯ ನಿರ್ಧಾರ ಅಗತ್ಯವಿರಲಿಲ್ಲ (24:27; ನೋಡಿರಿ). [42]ಇದು ಅಗ್ರಿಪ್ಪನ ವೈಯಕ್ತಿಕವಾದ ಅಭಿಪ್ರಾಯವಾಗಿತ್ತು, ಯಾಕಂದರೆ ಅದು ಅವನ ಸರಹದ್ದಿನಲ್ಲಿರಲಿಲ್ಲ. [43]ಅಧಿಪತಿಯು ತಡಮಾಡದೆ ನಿರ್ಧಾರ ಮಾಡಬಹುದಿತ್ತು (25:17). ತಕ್ಷಣವೇ ಪೌಲನನ್ನು ಯೆರೂಸಲೇಮಿಗೆ ಕಳಿಸಬಹುದಿತ್ತು. ಅಪೊಸ್ತಲರ ಕೃತ್ಯಗಳು 28:19ರ ವೆಸ್ಟರ್ನ್ ಟೆಕ್ಸ್‌ನಲ್ಲಿ "ಕೈಸರನಿಗೆ ಅಪೀಲು ಮಾಡಲು ಒತ್ತಾಯಕ್ಕೆ ಒಳಪಟ್ಟ ಅದರಿಂದ ನನ್ನ ಆತ್ಮವನ್ನು ಮರಣದಿಂದ ತಪ್ಪಿಸಬಹುದಿತ್ತು" ಎಂದು ಪೌಲನು ಹೇಳಿರುವನು (ಇದರಲ್ಲಿ ಪೌಲನು ಯಾವುದೇ ವಿಧವಾದ ತಪ್ಪನ್ನು ಮಾಡಿರಲಿಲ್ಲ. ಆತ್ಮನೇ ಅವನ ಮೂಲಕ ಮಾತಾಡಲು ಅವಾಶವಾಗಿತ್ತು [ಮಾರ್ಕ 13:11].) [44]1 ಕೊರಿಂಥ 10:13ರ ಶೋಧನೆ ಫೆರಾಸ್‌ಮೋಸ್, ಅಂದರೆ ಹೊಸ ಒಡಂಬಡಿಕೆಯ 2 ವಿಧಗಳು ಸೈತಾನನಿಂದ ಬರುವ ಕೆಟ್ಟತನಕ್ಕೆ ಶೋಧನೆ ಎನ್ನುವರು. ಯಾಕೋಬ 1:2 ಮತ್ತು ಸೈತಾನನಿಂದ ಬರುವಂತದ್ದು (ಯಾಕೋಬ 1:13). "ತಾಪತ್ರಯಗಳು" ದೇವರಿಂದ ಬಂದರೂ ನಮ್ಮ ನಂಬಿಕೆಯನ್ನು ನಾಶಪಡಿಸದೇ ಬಲಪಡಿಸುತ್ತದೆ. ಸೈತಾನನು ಕೆಟ್ಟತನಕ್ಕೆ ನಮ್ಮನ್ನು ಶೋಧಿಸುತ್ತಾನೆ; ದೇವರು ನಮ್ಮ ನಂಬಿಕೆಯನ್ನು ವೃದ್ಧಿಗೊಳಿಸುತ್ತಾನೆ ಪ್ರತಿಶೋಧನೆಯಲ್ಲೂ ತಪ್ಪಿಸಿಕೊಳ್ಳುವ ಮಾರ್ಗವಿರುತ್ತದೆ. ಹಾಗೂ ಬಲಗೊಳ್ಳುತ್ತಾನೆ. [45]Ed Wharton, *The Action of the Book of Acts* (Dallas: Gospel Teachers Publications, 1977), 57. [46]ಯೋಬ ಮೊದಲೆರಡು ಅಧ್ಯಾಯಗಳಿಂದ ನಿದರ್ಶನಗಳನ್ನು ಹೇಳಿರಿ. ತಾಪತ್ರಯಗಳ ಮೂಲಕ ದೇವರು ನಮ್ಮನ್ನು ಬಲಪಡಿಸುತ್ತಾನೆ. [47]ಯೋಸೇಫನು ಒಳ್ಳೇಯ ನಿದರ್ಶನವಾಗಿದ್ದಾನೆ: ಕಾಮಾಭಿಲಾಷೆಯ ಶೋಧನೆ ಯಲ್ಲಿ "ತಪ್ಪಿಸುವ ದಾರಿಯನ್ನು" ದೇವರು ತೋರಿಸಿ ಬಲವನ್ನು ನೀಡುತ್ತನೆ - ಯೋಸೇಫನ ವಿಷಯದಲ್ಲಿ ಅವನು ಓಡಿಹೋಗುವಂತ ದಾರಿಯನ್ನು ತೋರಿಸಿದನು (ಆದಿಕಾಂಡ 39:12). [48]ಈ ಭಾಗವನ್ನು ವೈಯಕ್ತಿಕವಾಗಿಯೂ, ಪ್ರಾಯೋಗಿಕವಾಗಿಯೂ ಮತ್ತು ಕೇಳುಗರ ಅಗತ್ಯಗನುಗುಣವಾಗಿ ಉಪಯೋಗಿಸಿರಿ. ಉದಾಹರಣೆಗೆ ನಾನು ವಾಸಿಸಿರುವಂತ ಸ್ಥಳದಲ್ಲಿ; ಅಸಂತೋಷದ ದಾಂಪತ್ಯ ಜೀವನವನ್ನು ಹೊಂದಿರುವದಾದರೆ, ದೇವರು ನಿಮ್ಮ ದಾಂಪತ್ಯ ಜೀವಿತವನ್ನು ಸರಿಪಡಿಸುವ ಮಾರ್ಗವನ್ನು ಅನುಗ್ರಹಿಸಲಿ. [49]Warren W. Wiersbe, *Wiersbe's Expository Outlines on the New Testament* (Wheaton, Ill.: Victor Books, 1992). [50]Warren W. Wiersbe, *The Bible Exposition Commentary*, vol. 1 (Wheaton, Ill.: Victor Books, 1989), 50.